ಶ್ರೀ ಚೌಡರೆಡ್ಡಿ.—ಮಾನ್ಯ ಅಧ್ಯಕ್ಷರೇ, ೧೯೬೨ರಲ್ಲಿ ೧೨ ಜನರಿಗೆ ಸೈಟ್‌ಗಳನ್ನು ಮಂಜೂರು ಮಾಡಿದರು. ಅವರಿಗೆ ಹಕ್ಕಿನ ಪತ್ರಗಳನ್ನು ಸಹ ಕೊಟ್ಟರು. ಅಂದರೆ ಇಲ್ಲಿಗೆ ೧೭ ವರ್ಷಗಳಾಯಿತು. ೧೯೭೨ರಲ್ಲಿ ನಾನು ಈ ಬಗ್ಗೆ ಒಂದು ಪ್ರಶ್ನೆ ಕೇಳಿದಾಗ ಯಾವ ರೀತಿ ಸರ್ಕಾರದವರು ಉತ್ತರ ಕೊಟ್ಟರೋ ಅದೇರೀತಿ ಈಗಲೂ ಉತ್ತರ ಕೊಟ್ಟಿದ್ದಾರೆ. ೧೯೭೨ರಲ್ಲಿ ಇದಕ್ಕೆ ಸಂಬಾಧಪಟ್ಟ ರೆಕಾರ್ಡ್ಸ್ ಹಾಳಾಗಿದೆ. ಅನಂತರ ಅಲ್ಲಿಯ ಜಿಲ್ಲಾಧಿಕಾರಿಯವರು ಸ್ಥಳಕ್ಕೆ ಹೋಗಿ ಮಹಜರು ನಡೆಸಿದರು. ೧೯೭೪ರಲ್ಲಿ ಮತ್ತೆ ರೆಕಾರ್ಡ್‌ಗಳನ್ನು ಮಾಡಿದರು. ಈಗ ಪುನಃ ರೆಕಾರ್ಡ್‌ಗಳು ಹಾಳಾಗಿವೆ, ಈ ವಿಚಾರದಲ್ಲಿ ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲವೆಂದು ನಮಗೆ ಹೇಳಿಬಿಟ್ಟರೆ ನಾವು ಅವರನ್ನು ಬೇರೆ ಕಡೆಗಾದರೂ ಕಳುಹಿಸಿಕೊಡುವುದಕ್ಕೆ ಏರ್ಪಾಡು ಮಾಡಬಹುದು. ಆದ್ದರಿಂದ ಈ ಬಗ್ಗೆ ನಿರ್ಧಿಷ್ಟವಾದ ಉತ್ತರ ನನಗೆ ಮಾನ್ಯ ಮಂತ್ರಿಗಳಿಂದ ಬೇಕಾಗಿದೆ?

ಶ್ರೀ ಕೆ. ಪ್ರಭಾಕರ್.—ಇದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವಂತಹ ಅಂಶಗಳು ಇದರಲ್ಲಿ ಯಾವುದೂ ಕಾಣುವುದಿಲ್ಲ. ರೆಕಾರ್ಡ್ ಕಳೆದು ಹೋಗಿದೆ. ಈ ಬಗ್ಗೆ ಸೂಚನೆ ಕೊಟ್ಟಾಗಿದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಅವರಿಗೆ ಕೊಡುತ್ತೇವೆ.

ಶ್ರೀ ಚೌಡರೆಡ್ಡಿ.—ಈಗಾಗಲೇ ೧೭ ವರ್ಷಗಳಾದವು. ಇನ್ನೂ ಎಷ್ಟು ವರ್ಷಗಳು ಬೇಕು ಎಂಬುದನ್ನು ಹೇಳುತ್ತೀರಾ?

ಶ್ರೀ ಕೆ. ಪ್ರಭಾಕರ್.—ಇನ್ನು ವರ್ಷಗಳು ಬೇಕಾಗುವುದಿಲ್ಲ. ಇದು ಯಾವ ರೂಪದಲ್ಲಿದೆ ಎಂಬುದು ಈಗ ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಯಾರು ಇದಕ್ಕೆ ಕಾರಣರಾಗಿದ್ದಾರೆನ್ನುವುದರ ಬಗ್ಗೆ ವಿಚಾರಣೆ ನಡೆಸಿ, ಈ ಕೆಲಸವನ್ನು ಜಾಗ್ರತೆ ಮಾಡಿಕೊಡುತ್ತೇವೆಂದು ಮತ್ತೊಮ್ಮೆ ತಮಗೆ ತಿಳಿಸುತ್ತೇನೆ.

ಶ್ರೀ ಚೌಡರೆಡ್ಡಿ.—೧೯೬೨ರಲ್ಲಿ ರೆಕಾರ್ಡ್ಸ್ ಹಾಳಾಗಿದೆ ಇದನ್ನು ಪರಿಶೀಲನೆ ಮಾಡಿ ಜಾಗ್ರತೆ ಮಾಡಿಕೊಡುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿಯವರೆಗೆ ಮಾಡಿಕೊಡಲಿಲ್ಲ. ಈಗ ಬಿ.ಡಿ.ಒ. ಕಛೇರಿಯಲ್ಲಿ ರೆಕಾರ್ಡ್ಸ್ ಹೋಗಿದೆ ಎಂದು ಹೇಳುತ್ತೀರಿ. ಕಾನೂನು ಪ್ರಕಾರ ಕ್ರಮ ಕೈಕೊಳ್ಳುವುದಾಗಿ ತಾವು ಇಲ್ಲಿ ಹೇಳುತ್ತೀರಿ. ಆದರೆ ಅಲ್ಲಿ ಮನೆ ಕಟ್ಟಿಕೊಂಡವರು ಅನೇಕ ಸಲ ಹೊಡೆತ ತಿಂದಿದ್ದಾರೆ. ಅಧಿಕಾರಿಗಳು ಮನೆ ಕಟ್ಟಿಕೊಳ್ಳಿ ಎಂದು ಹೇಳುತ್ತಾರೆ. ಪೋಲೀಸಿನವರು ಸಹ ಹೇಳುತ್ತಾರೆ. ಅದರಂತೆ ಅವರು ಮನೆ ಕಟ್ಟಿಕೊಳ್ಳಲು ಹೋದರೆ ಆ ಜಾಗ ನಿಮ್ಮದಲ್ಲ ಎಂದು ಒದೆಯುತ್ತಾರೆ. ಇದರ ಬದಲು ಅಲ್ಲಿ ಜಾಗ ಕೊಡುವುದಕ್ಕಾಗುವುದಿಲ್ಲವೆಂದರೆ ಅವರು ಬೇರೆ ಎಲ್ಲಿಯಾದರೂ ಹೋಗುತ್ತಾರೆ. ಆದಕಾರಣ ಈ ಬಗ್ಗೆ ಸ್ಪಷ್ಟವಾದ ಭರವಸೆ ಬೇಕು;

ಶ್ರೀ ಕೆ. ಪ್ರಭಾಕರ್.—ಪಂಚಾಂಗ ಹೋದರೆ ನಕ್ಷತ್ರ ಹೋಗವುದಿಲ್ಲ. ಇಲ್ಲಿ ತಪ್ಪು ಯಾರು ಮಾಡಿದ್ದಾರೆಂಬ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ, ನಂತರ ಅವರ ಹಕ್ಕನ್ನು ರಕ್ಷಣೆ ಮಾಡಿ ಬೇಗ ಸಹಾಯ ಮಾಡುವುದಾಗಿ ಈಗಾಗಲೇ ಹೇಳಿದ್ದೇನೆ. ನಾನು ಎಷ್ಟು ಸಲ ಹೇಳಿದರೂ ಇದೇ ಉತ್ತರ ಖಚಿತ. ಬೇಗ ಇದನ್ನು ಮಾಡಿಕೊಡುತ್ತೇನೆ.

KARNATAKA PRESERVATION OF TREES (AMENDMENT) BILL 1979

as passed by the Legislative Council

Motion to Consider

† SRI G. RAME GOWDA (Minister for Food and Forest) :—Sir I beg to move :

"That the Karnataka Preservation of Trees (Amendment) Bill, 1979, as passed by the Legislative Council, be taken into consideration."

The Question was proposed

ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಅರಣ್ಯಸಂಪತ್ತನ್ನು ಆದಷ್ಟುಮಟ್ಟಿಗೆ ಕಾಪಾಡಬೇಕೆಂಬ ಸದುದ್ದೇಶದಿಂದ ೧೯೭೬ನೇ ಇಸವಿ ಜುಲೈ ೨೧ರಲ್ಲಿ Karnataka Preservation of Trees Act, 1976 ಎಂದು ಜಾರಿಗೆ ಬಂತು. ಆ ಸಮಯದಲ್ಲಿ ಇದು ಇಲ್ಲಿ ಚರ್ಚೆಗೆ ಬಂದಾಗ ಅನೇಕ ಮಾನ್ಯ ಸದಸ್ಯರು ಟೀ ಪ್ಲಾನ್‌ಟೇಷನ್ ಇಟ್ಟಿರುವವರು ಪ್ರತಿದಿನ ಇಲ್ಲವೇ ವಾರಕ್ಕೊಮ್ಮೆ ಇಲಾಖೆ ಅಧಿಕಾರಿಗಳ ಅಪ್ಪಣೆ ಪಡೆದು ತಮಗೆ ಬೇಕಾದ ಸೌದೆಯನ್ನು ಕಡಿದುಕೊಳ್ಳುವುದಕ್ಕೆ ಸಾಧ್ಯವಿಲ್ಲವಾದ ಕಾರಣ ಅವರಿಗೆ ಇದರಿಂದ ವಿನಾಯಿತಿ ಕೊಡಬೇಕೆಂದು ಒತ್ತಾಯ ಮಾಡಿದ್ದರು. ಆಗ ಈ ವಿಷಯವನ್ನು ಪರಿಶೀಲನೆ ಮಾಡುವುದಾಗಿ ಭರವಸೆ ಕೊಡಲಾಗಿತ್ತು. ಆ ಭರವಸೆಯ ಪ್ರಕಾರ ಮೊದಲಿನ ಆಕ್ಟ್ ಪ್ರಕಾರ ಈ ಒಂದು ಅನುಕೂಲವನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವಿಲ್ಲದಿದ್ದ ಕಾರಣದಿಂದ ೧೯೭೮ನೇ ಇಸವಿ ಸೆಪ್ಟೆಂಬರ್ ೨೨ರಲ್ಲಿ ಈ ಬಗ್ಗೆ ಒಂದು ಆರ್ಡಿನೆನ್ಸ್ ಹೊರಡಿಸಲಾಯಿತು. ಟೀ ಪ್ಲಾನ್‌ಟೇಷನ್ ಅಸೋಸಿಯೇಷನ್ ಅವರು ಕೇಳಿಕೊಂಡಂತೆ, ಅವರದೇ ಜಮೀನಿನಲ್ಲಿ ಏನಾದರೂ ಮರಗಳು ಬಿದ್ದು ಹೋದರೆ ಇಲ್ಲವೇ ಸೌದೆಗಾಗಿ ಅವರಿಗೆ ಮರ ಬೇಕಾದರೆ, ಅರಣ್ಯ ಇಲಾಖೆಯವರ ಅಪ್ಪಣೆಯಿಲ್ಲದೆ ಮರಗಳನ್ನು ಕಡಿದುಕೊಳ್ಳಬಹುದೆಂದು ಈ ತಿದ್ದುಪಡಿಯಲ್ಲಿ ಸೂಚಿಸಲಾಗಿದೆ. ಮುಖ್ಯವಾಗಿ ಟೀ ಪ್ಲಾನ್‌ಟೇಷನ್ ಅವರಿಗೆ ಅನುಕೂಲವಾಗುವಂತೆ ಇದನ್ನು ತಿದ್ದುಪಡಿ ಮಾಡಲಾಗಿದೆ. ಮೇಲ್ಮನೆಯಲ್ಲಿ ಈ ತಿದ್ದುಪಡಿ ಮಸೂದೆಗೆ ಒಪ್ಪಿಗೆ ಕೊಟ್ಟಿರುವುದರಿಂದ ಇಲ್ಲಿಯೂ ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಟ್ಟು, ಈ ಬಿಲ್ಲನ್ನು ಆಕ್ಟ್ ಆಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಮುನಿರಾಜು (ಬಾಗೇಪಲ್ಲಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಖಾತೆಯ ಮಂತ್ರಿಗಳು ಹೇಳಿದ ರೀತಿಯಲ್ಲಿ ಇದು ಬಹಳ ಮುಖ್ಯವಾದುದು. ೧೯೭೬ರಲ್ಲಿ ಈ ವಿಧೇಯಕ ಪಾಸಾದರೂ ಸಹಾ ಸ್ವಲ್ಪ ತೊಡಕು ಬಂತು ಎಂದು ಹೇಳಿದ್ದಾರೆ. ಟೀ ಪ್ಲಾಂಟೇಷನ್ ಏನಿದೆಯೋ ಅದಾ ಬಗ್ಗೆ ಸ್ವಲ್ಪ ತೊಡಕು ಬಂದದ್ದರಿಂದ ಒಂದು ಆರ್ಡಿನೆನ್ಸ್ ಹೊರಡಿಸಿ ಈಗ ಅದನ್ನು ಕ್ರಮಗೊಳಿಸುವುದಕ್ಕೆ ಈ ಒಂದು ವಿಧೇಯಕವನ್ನು ತಂದಿದ್ದೇವೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಈಗ ನಾನು ಸರ್ಕಾರದಲ್ಲಿ ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತೇನೆ ಇದರ ಬಗ್ಗೆ ಅನೇಕ ನನ್ನ ಸ್ನೇಹಿತರೂ ಕೂಡ ಹೇಳಿದ್ದಾರೆ ಒಂದು ಬಿಲ್ಲನ್ನಾಗಲಿ, ಒಂದು ಆರ್ಡಿನೆನ್ಸ್ ಆಗಲಿ ಮಾಡಿದರೆ ಅದು ಸಾರ್ವಜನಿಕರಿಗೆ ಮುಖ್ಯವಾಗಿ ಬೇಕಾಗಿದೆಯೇ ಅಥವಾ ಇಲ್ಲವೇ ಎಂಬುದುದನ್ನು ಪರಿಶೀಲನೆ ಮಾಡತಕ್ಕ ವ್ಯವಸ್ಥೆ ಸರ್ಕಾರದಲ್ಲಿ ಇಲ್ಲದಂತೆ ಕಾಣುತ್ತದೆ. ಆದ್ದರಿಂದ ದಯವಿಟ್ಟು ಸಂಬಂಧಪಟ್ಟವರು ಅದನ್ನು ಏರ್ಪಾಡು ಮಾಡತಕ್ಕದು ಒಳ್ಳೆಯದು. ೧೯೭೬ನೇ ಇಸವಿಯಲ್ಲಿ ಈ ಆಕ್ಟ್ ಪಾಸಾಯಿತು. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಆರ್ಡಿನೆನ್ಸ್ ತಂದು ಆಕ್ಟ್ ಮಾಡಿದರೂ ಕೂಡ ಇದರ ಅವಶ್ಯಕತೆ ಇದೆಯೇಎಂಬುದು ಬಹಳ ಮುಖ್ಯವಾದುದು. ೧೯೭೬ನೇ ಇಸವಿಯಲ್ಲಿ ಈ ಒಂದು ಆಕ್ಟ್ ಪಾಸಾಯಿತು. ಅಲ್ಲಿಂದ ಇಲ್ಲಿಯವರೆಗೂ ಇದನ್ನು ಯಾಕೆ ಜಾರಿಗೆ ಕೊಡಲಿಲ್ಲ. ಈಗ ಟೀ ಪ್ಲಾಂಟೇಷನ್‌ಗೆ ವಿನಾಯಿತಿ ಕೊಡುವುದಕ್ಕೋಸ್ಕರ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ೧೯೭೬ನೇ ಇಸವಿಯಲ್ಲಿ ಪಾಸಾದಂತಹ ಈ ಆಕ್ಟಿನಲ್ಲಿ ಅನೇಕ ಬಹಳ ಮುಖ್ಯವಾದ ಅಂಶಗಳು ಇವೆ. ಆದರೂ ಸಹ ಈ ಆಕ್ಟಿಗೆ ರೂಲ್ಸ್ ಮಾಡುವುದಕ್ಕೆ ಕಳೆದ ತಿಂಗಳು ನೋಟಿಫಿಕೇಷನ್ ಆಗಿದೆ. ರೂಲ್ಸ್ ಮಾಡುವುದಕ್ಕೆ ೨ ವರ್ಷ ತಡವಾಗಿದೆ. ಈಗ ಒಂದು ಆರ್ಡಿನೆನ್ಸ್ ಹೊರಡಿಸಿ ಅದರ ಬಗ್ಗೆ ಒಂದು ಬಿಲ್ಲನ್ನು ತಂದಿದ್ದಾರೆ. ಈಗ ಇದರ ಅವಶ್ಯಕತೆ ಇದೆಯೋ ಅಥವಾ ಇಲ್ಲವೇ? ಇದು ಮಾನ್ಯ ಮಂತ್ರಿಗಳಿಗೆ ಬಹಳ ಚೆನ್ನಾಗಿ ಗೊತ್ತಿದೆ. ಟ್ರೀ ಅಥಾರಿಟಿಯನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಮಾಡಬೇಕೆಂದು ಕಾನೂನಿನಲ್ಲಿದೆ. ಇದು ಬಹಳ ಉತ್ತಮವಾದುದಾದರೂ ಇದನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿದ್ದಾರೆಯೇ? ಅಧಿಕಾರಿಗಳೂ ಕೂಡ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ನಿಜವಾಗಿಯೂ ಇದಕ್ಕೆ ಯಾರು ಜವಾಬ್ದಾರರಾಗುತ್ತಾರೆ ಎಂಬುದನ್ನು ತಿಳಿಸಬೇಕೆಂದು ಮಾನ್ಯಮಂತ್ರಿಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

† ಶ್ರೀ ಎಸ್.ಎಂ. ಶೀರಾಳಿ ಚಂದ್ರಶೇಖರ್ (ಹೊಸನಗರ).—ಸ್ವಾಮಿ, ೧೯೭೬ನೇ ಇಸವಿಯಲ್ಲಿ ಈ ಒಂದು ವಿಧೇಯಕ ಸಭೆಯಮುಂದೆ ಬಂದಾಗ ಆಗಿನ ಮಂತ್ರಿಗಳಲ್ಲಿ ನಾವು ಕೆಲವು ವಿಜ್ಞಾಪನೆಗಳನ್ನು ಮಾಡಿಕೊಂಡಿದ್ದೆವು. ನಮ್ಮ ಹಿಡುವಳಿಗಳಲ್ಲಿರತಕ್ಕಂತಹ ಮರಗಳನ್ನು ಕಡಿಯಬೇಕಾದರೆ ಪರವಾನಿಗೆ ಪಡೆಯದೆ ಮರವನ್ನು ಕಡಿಯಕೂಡದು ಎಂದು ಮಾಡಿರತಕ್ಕಂತಹದ್ದು ಒಂದು ಕಠೋರವಾದ ಶಾಸನ. ಮಲೆನಾಡಿನಲ್ಲಿ ಅಡಿಕೆಯನ್ನು ಬೆಳೆಯುತ್ತಾರೆ. ಆದ್ದರಿಂದ ಅಡಿಕೆ ಪ್ಲಾಂಟೇಷನ್‌ನವರಿಗೆ ಹೇರಳವಾದ

ಕಟ್ಟಿಗೆ ಬೇಕು. ಆ ಕಟ್ಟಿಗೆಯನ್ನು ತೆಗೆದುಕೊಳ್ಳಬೇಕಾದರೆ ಪರ್ಮಿಷನ್ ತೆಗೆದುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಅಡಿಕೆಯನ್ನು ಬೇಯಿಸುವ ಸಮಯದಲ್ಲಿ ಕಟ್ಟಿಗೆಯನ್ನು ಕಾಡಿನಿಂದ ತೆಗೆದುಕೊಳ್ಳುವ ಬಗ್ಗೆ ಲೈಸೆನ್ಸ್ ಪಡೆದುಕೊಳ್ಳುವುದಕ್ಕೆ ಎಕ್ಸಂಪ್ಷನ್ ಕೊಡಬೇಕೆಂದು ಕೇಳಿಕೊಂಡಿದ್ದೆವು. ಆ ಸಮಯದಲ್ಲಿ ಶ್ರೀಮಾನ್ ಕೆ.ಎಚ್. ಪಾಟೀಲರವರು ಅರಣ್ಯ ಖಾತೆಯ ಮಂತ್ರಿಗಳಾಗಿದ್ದರು. ಆದರೆ ನಮ್ಮ ಬೇಡಿಕೆಗಳು ಹಾಗೆಯೇ ಉಳಿದಿವೆ. ಟೀ ಪ್ಲಾಂಟೇಷನ್ ಬಗ್ಗೆ ಮಾತ್ರ ಎಕ್ಸಂಪ್ಷನ್ ಕೊಡಬೇಕೆಂದು ಈಗ ತಿದ್ದುಪಡಿಯನ್ನು ತಂದಿದ್ದಾರೆ. ಅಡಿಕೆ ಬೇಯಿಸತಕ್ಕ ಜನರಿಗೆ ಕಟ್ಟಿಗೆಯ ಅವಶ್ಯಕತೆ ಬಹಳ ಇದೆ. ಕಟ್ಟಿಗೆ ಇಲ್ಲದೆ ಅಡಿಕೆ ಬೇಯಿಸುವುದಕ್ಕೆ ಸಾಧ್ಯವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಸಿ ಅಡಿಕೆಯನ್ನು ತಯಾರು ಮಾಡುತ್ತಾರೆ. ಆದರೆ ನಮ್ಮ ಮಲೆನಾಡಿನಲ್ಲಿ ಅಡಿಕೆಯನ್ನು ಬೇಯಿಸುತ್ತಾರೆ. ಆದ್ದರಿಂದ ಹೇರಳವಾದ ಕಟ್ಟಿಗೆ ಬೇಕಾಗುತ್ತದ. ಮಳೆಗಾಲ ಬಂದರೆ ಕಟ್ಟಿಗೆಯನ್ನೊದಗಿಸಿಕೊಳ್ಳುವುದು ಕಷ್ಟವಾಗುತ್ತದೆ. ಅಡಿಕೆಯನ್ನು ಬೇಯಿಸತಕ್ಕ ಕಾಲದಲ್ಲಿ ಅಡಿಕೆ ಬೆಳೆಗಾರರು ಬಹಳ ಬವಣೆ ಪಡುತ್ತಿದ್ದಾರೆ. ಟೀ ಪ್ಲಾಂಟೇಷನ್ ಅವರಿಗೆ ಯಾವ ರೀತಿ ಎಕ್ಸಂಪ್ಷನ್ ಕೊಟ್ಟಿದ್ದೀರೋ ಅದೇ ರೀತಿ ಅಡಿಕೆ ಬೆಳೆಗಾರರಿಗೂ ಕೂಡ ಎಕ್ಸಂಪ್ಷನ್ ಕೊಡುವುದು ಒಳ್ಳೆಯದು. ಮಾಲೆನಾಡಿನಲ್ಲಿ ಕಟ್ಟಿಗೆಗೋಸ್ಕರ ಜನಗಳು ಎಷ್ಟು ಕಷ್ಟಪಡುತ್ತಿದ್ದಾರೆಂಬುದು ನನಗೆ ಗೊತ್ತಿದೆ. ಗೋಬರ್ ಗ್ಯಾಸ್ ಹಾಕಿಕೊಳ್ಳಿ ಎಂದು ಹೇಳುತ್ತಾರೆ. ಇದು ಶ್ರೀಮಂತರಿಗೆ ಸಾಧ್ಯವಾಗುತ್ತದೆಯೇ ಹೊರತು ಬಡವರಿಗೆ ಸಾಧ್ಯವಾಗುವುದಿಲ್ಲ. ಗೋಬರ್ ಗ್ಯಾಸ್ ಹಾಕುವುದಕ್ಕೆ ಬಹಳ ವೆಚ್ಚ ತಗಲುತ್ತದೆ. ಆದ್ದರಿಂದ ಟೀ ಪ್ಲಾಂಟೇಷನ್ ಅವರಿಗೆ ಯಾವ ರೀತಿ ರಿಯಾಯಿತಿ ಕೊಡುತ್ತಿರೋ ಅದೇ ರೀತಿ ಅಡಿಕೆ ಬೆಳೆಗಾರರಿಗೂ ರಿಯಾಯಿತಿ ಕೊಡಬೇಕೆಂದು ಸೂಚಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಕೆ. ಶಿವರುದ್ರಪ್ಪ. (ಗುಂಡ್ಲುಪೇಟೆ)— ಮಾನ್ಯ ಅಧ್ಯಕ್ಷರೆ, 1976ನೇ ಇಸವಿಯಲ್ಲಿ ಟ್ರೀಪ್ರಿಸರ್ವೇಷನ್ ಆಕ್ಟ್ ಪಾಸಾಯಿತು. ಅಲ್ಲಿಂದೀಚೆಗೆ ದೇಶದ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ಈ ಸಭೆಗೆ ತಿಳಿಸುವುದು ನನ್ನ ಕರ್ತವ್ಯ. ಸ್ವಾಮಿ, ಅರಣ್ಯ ವರ್ಷೇ ವರ್ಷೆ ಕಡಿಮೆಯಾಗುತ್ತಿದೆ. ಅದನ್ನು ನಾವು ಅಭಿವೃದ್ಧಿಪಡಿಸಬೇಕು. ಈ ದೃಷ್ಟಿಯಿಂದ ಇದು ಅವಶ್ಯಕ ಎನ್ನತಕ್ಕ ವಾದವನ್ನು ಒಪ್ಪುತ್ತೇನೆ. ಸರ್ಕಾರದ ಮತ್ತು ಎಲ್ಲರ ಅಭಿಪ್ರಾಯವೂ ಕೂಡ ಕಾಡನ್ನು ಬೆಳೆಸಬೇಕು. ಕಾಡನ್ನು ಉಳಿಸಬೇಕು ಎನ್ನುವುದೇ ಆಗಿದೆ. ಈಗ ಸರ್ಕಾರದವವು ಕಾಡಿನಲ್ಲಿ ಮರಗಳನ್ನು ಕಡಿಯುವುಕ್ಕೆ, ಸೌದೆಯನ್ನು ತರುವುದಕ್ಕೆ ಪರವಾನಗೆ ಕೊಡುವುದಿಲ್ಲ. ಕಾಡಿಂದ ಸೌದೆಯನ್ನು ತರುವುದಕ್ಕೆ ಸರ್ಕಾರದವರು ಅವಕಾಶವನ್ನು ಕೊಡದೆ ಇದ್ದರೆ ಸೌದೆಯನ್ನು ಎಲ್ಲಿಂದ ತರಬೇಕು. ಸಾಮಾನ್ಯವಾಗಿ ಜನರು ತಾತ, ಮುತ್ತಾತನ ಕಾಲದಿಂದಲೂ ಅಡಿಗೆಗೋಸ್ಕರ ಸೌದೆಯನ್ನು ಕಾಡಿನಿಂದ ತರತಕ್ಕಂತಹ ಪರಿಪಾಠ ಇದು ಇಲ್ಲದೆ ಹೋದರೆ ವ್ಯವಹಾರ ನಡೆಯುವುದಿಲ್ಲ. ನಮ್ಮ ಸ್ವಂತ ಜಮೀನಿನಲ್ಲಿರತಕ್ಕ ಮರಗಳನ್ನು ಕಡಿಯಬಾರದು. ಅವುಗಳನ್ನು ಕಡಿಯಬೇಕಾದರೆ ಸರ್ಕಾರದಿಂದ ಮಾಫಿ ಲೈಸೆನ್ಸ್ ತೆಗೆದುಕೊಂಡು ಬಂದ ಕಡಿಯಬೇಕೆಂದು ಮಾಡಿದ್ದಾರೆ. ಇದರಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳಿಗೆ ತುಂಬಾ ಕಷ್ಟವಾಗಿದೆ. ಬೆಂಗಳೂರು ಮತ್ತು ಇತರ ಪಟ್ಟಣಗಳ ಪ್ರಶ್ನೆಯೇ ಬೇರೆ. ಬೆಂಗಳೂರಿನಲ್ಲಿ ಅಡಿಗೆ ಮತ್ತು ಸ್ನಾನಕ್ಕಾಗಿ ಬೇರೆ ಬೇರೆ ಸೌಲಭ್ಯಗಳನ್ನು ಕಲ್ಪಿಸಿಕೊಂಡಿದ್ದಾರೆ. ಎಲೆಕ್ಟ್ರಿಸಿಟಿ ಇದೆ, ಸೀಮೆಯೆಣ್ಣೆ ಇದೆ ಇದ್ದಿಲು ಇದೆ, ಹೀಗೆ ನಾನಾ ತರದ ಸೌಲಭ್ಯಗಳನ್ನು ಪಟ್ಟಣದವರು ಪಡೆದುಕೊಂಡಿದ್ದಾರೆ ಗ್ರಾಮಾಂತರ ಪ್ರದೇಶದವರಾದ ನಮಗೆ ಸೌದೆಬಿಟ್ಟರೆ ಬೇರೆ ಯಾವುದೂ ಇಲ್ಲ. ಹೊಸ ವ್ಯವಸ್ಥೆಗೆ ಹೊಂದಿಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಗೋಬರ್ ಗ್ಯಾಸ್ ಪ್ಲಾಂಟ್ ಹಾಕಿಕೊಳ್ಳಬೇಕಾದರೂ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸೌದೆಯ ಸಮಸ್ಯೆ ನಮ್ಮ ದೇಶದಲ್ಲಿ ಒಂದು ದೊಡ್ಡ ಕ್ರಾಂತಿಯಾಗುತ್ತಿದೆ. ನಮ್ಮ ಜಮೀನಿನಲ್ಲಿರತಕ್ಕ ಮರಗಳನ್ನು ಕಡಿಯುವುದಕ್ಕೂ ಇವತ್ತು ಅವಕಾಶ ಕೊಡುತ್ತಿಲ್ಲ. ರೈತ ತನ್ನ ಜಮೀನಲ್ಲಿರತಕ್ಕ ಮರ ಕಡಿಯಬೇಕಾದರೆ ಮಾಫಿ ಲೈಸೆನ್ಸ್ ಪಡೆದುಕೊಳ್ಳಬೇಕು. ಲೈಸೆನ್ಸ್ ತೆಗೆದುಕೊಳ್ಳದೆ ಮರ ಕಡಿದರೆಕೇಸು ಹಾಕುತ್ತಾರೆ. ಈ ದೃಷ್ಟಿಯಿಂದ ರೈತನಿಗೆ ಎಷ್ಟು ತೊಂದರೆ ಇದೆ ಎಂಬುದನ್ನು ತಿಳಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮೊದಲು ರೈತರು ಯಾರಾದರೂ ತಮ್ಮ ಜಮೀನಿನಲ್ಲಿರತಕ್ಕಂತಹ ಮರವನ್ನು ಕಡಿಯಬೇಕಾದರೆ ಮಾಫಿ ಲೈಸೆನ್ಸ್ ತೆಗೆದುಕೊಳ್ಳಲು ಮೊದಲು ರೇಂಜ್ ಫಾರೆಸ್ಟ್ ಆಫಿಸರಿಗೇ ಅರ್ಜಿಹಾಕಿಕೊಳ್ಳಬೇಕು. ಅವರು ಅದನ್ನು ಸಂಬಂಧಪಟ್ಟ ತಹಶೀಲ್ದಾರವರಿಗೆ ಕಳುಹಿಸಿಕೊಡುತ್ತಾರೆ. ಅವರು ಆ ಜಮೀನು ಅರ್ಜಿದಾರರಿಗೆ ಸೇರಿದೆಯೇ? ಅಲ್ಲಿ ಮರ್ ಇದೆಯೇ? ಎಂಬುದನ್ನು ನೋಡಿ ತಿಳಿಸಬೇಕೆಂದು ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಕಳುಹಿಸುತ್ತಾರೆ. ಆ ಮೇಲೆ ರೆವಿನ್ಯೂ

ಇನ್ಸ್‌ಪೆಕ್ಟರ ಆ ಮರ ಅವನಿಗೆ ಸೇರಿದೆಯೋ ಇಲ್ಲವೋ ಎಂಬುದನ್ನು ತಿಳಿದು ತಹಸೀಲ್ದಾರರಿಗೆ ವರದಿ ಕಳುಹಿಸುತ್ತಾರೆ. ಆದಾದ ಮೇಲೆ ಇದನ್ನು ತಹಸೀಲ್ದಾರರು ಡಿ.ಎಫ್.ಓ.ಗೆ ಕಳುಹಿಸುತ್ತಾರೆ. ಡಿ.ಎಫ್.ಓ. ಅದನ್ನು ವಿಚಾರಣೆ ಮಾಡಿ ಡೆಪ್ಯೂಟಿ ಕಮಿಷನರ್‌ಗೆ ಕಳುಹಿಸುತ್ತಾರೆ. ಡೆಪ್ಯೂಟಿ ಕಮಿಷನರ್ ಆ ಜಮೀನಿನ ಡಿಕ್ಲರೇಷನ್ ಆಗಿದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ಟ್ರಿಬ್ಯೂನಲ್‌ಗೆ ಕಳಿಸುತ್ತಾರೆ. ಇದೆಲ್ಲಾ ಪ್ರೊಸೀಜರುಗಳೂ ಆಗಿ ಮತ್ತೆ ಡೆಪ್ಯೂಟಿ ಕಮಿಷನರ್‌ಗೆ ಬಂದು ಅದರ ಒಂದು ತೀರ್ಮಾನ ಬರಬೇಕಾದರೆ 2 ವರ್ಷ ಬೇಕಾಗುತ್ತದೆ. ಅಲ್ಲಿಯವರೆಗೆ ರೈತನ ಗತಿ ಏನು? ನನ್ನ ಸ್ವಂತ ಜಮೀನಿನಲ್ಲಿ ಒಂದು ಮರ ಕಡಿಯುವುದಕ್ಕೆ ಅರ್ಜಿ ಹಾಕಿ ಒಂದು ವರ್ಷದ ಮೇಲೆ ಮೂರು ತಿಂಗಳಾಯಿತು ಇನ್ನೂ ನನಗೆ ಲೈಸೆನ್ಸ್ ಬಂದಿಲ್ಲ. ನನ್ನಂತಹವನಿಗೆ ಹೀಗಾದರೆ ಇನ್ನು ಸಾಮಾನ್ಯ ರೈತನಿಗೆ ಎಷ್ಟು ಕಷ್ಟವಾಗುತ್ತದೆ. ಅವನು ಹೇಗೆ ಜೀವನ ಮಾಡಬೇಕು? ಕಾಡಿನಲ್ಲಿ ಸೌದೆ ಕಡಿಯುವುದಕ್ಕೆ ಅವಕಾಶ ಕೊಡುವುದಿಲ್ಲ. ಮರವನ್ನು ಕಡಿಯುವುದಕ್ಕೆ ನಾನಾ ತೊಂದರೆಗಳು ಇವೆ. ಜನಗಳಿಗೆ ಸೌದೆ ಒದಗಿಸುವುದು ಸರ್ಕಾರದ ಜವಾಬ್ದಾರಿ. ಆದರೆ ಸರ್ಕಾರದವರು ಆ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ನಮ್ಮ ರಾಜ್ಯಕ್ಕೆ ಒಂದು ವರ್ಷಕ್ಕೆ 5 ಲಕ್ಷ ಟನ್ ಸೌದೆ ಬೇಕಾಗುತ್ತದೆ. ಆದರೆ ಸಪ್ಲೈ ಆಗುವುದು ಕೇವಲ ಒಂದು ಲಕ್ಷ ಟನ್ ಮಾತ್ರ. ಸರ್ಕಾರದವರು ನಮ್ಮ ರಾಜ್ಯದಲ್ಲಿ ಸೌದೆ ಡಿಪೋ ತೆರೆದು ಜನರಿಗೆ ಸೌದೆ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ನಮ್ಮ ಗುಂಡ್ಲುಪೇಟೆಯಲ್ಲಿ ಸೌದೆ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ನಮಗೆ ಸೌದೆಯನ್ನೊದಗಿಸಬೇಕೆಂದು ನಾನು ಅನೇಕ ಸಾರಿ ಅಧಿಕಾರಿಗಳಿಗೆ ಹಾಗೂ ಮಂತ್ರಿಗಳಿಗೆ ತಿಳಿಸಿದ್ದೇನೆ. ಆದರೂ ಸಹಾ ಸೌದೆಯನ್ನು ಒದಗಿಸಿಲ್ಲ. ಮಾಫಿ ಲೈಸೆನ್ಸನ್ನು ರೈತ ಅರ್ಜಿಯನ್ನು ಹಾಕಿದ ಒಂದು ತಿಂಗಳೊಳಗಾಗಿ ಕೊಡುವಂತಹ ವ್ಯವಸ್ಥೆ ಮಾಡಬೇಕು. ಒಂದು ತಿಂಗಳಲ್ಲಿ ಲೈಸೆನ್ಸ್ ಬರದೇಹೋದರೆ ರೈತ ಮರ ಕಡಿಯುವುದಕ್ಕೆ ಅವಕಾಶ ಕಲ್ಪಿಸಬೇಕು ಈ ರೀತಿ ಮಾಡಿದರೆ ಸಮಸ್ಯೆಯೂ ಬಗೆಹರಿಯುತ್ತದೆ. ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಹೇರಳವಾಗಿ ಸೌದೆಯನ್ನು ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ಹೊರಬೇಕು. ಇಲ್ಲದೆ ಹೋದರೆ ಜನಗಳು ಕಳ್ಳತನದಿಂದ ಸೌದೆಯನ್ನು ಕಾಡಿನಿಂದ ಹೊತ್ತುಕೊಂಡು ಬರುತ್ತಾರೆ ನಮ್ಮ ಗುಂಡ್ಲುಪೇಟೆಯಲ್ಲಿ ಕೆಲವು ಜನ ಸೌದೆ ತಲೆಹೊರೆಯನ್ನು ಹೊತ್ತುಕೊಂಡು ಬರುತ್ತಾರೆ. ಅವರಿಗೆ ಒಂದು ಹೊರೆಗೆ ಹತ್ತು ಹನ್ನೆರಡು ರೂಪಾಯಿ ಸಿಕ್ಕುತ್ತದೆ. ಈ ಜನರು ಬಹಳ ಬಡವರು. ಜೀವನಕ್ಕೆ ಬೇರೆ ದಾರಿಯಿಲ್ಲದ ಕಾರಣ ಅವರು ಈ ವೃತ್ತಿಯನ್ನು ಕೈಗೊಂಡಿದ್ದಾರೆ. ಅಂತಹವರ ಮೇಲೆ ಪೋಲೀಸ್‌ನವರು ಕೇಸ್ ಹಾಕಿದ್ದಾರೆ. ಹೊಟ್ಟೆಗಿಲ್ಲದವರ ಮೇಲೆ ಇಂತಹ ಅನ್ಯಾಯ ನಡೆಯುತ್ತಿದೆ. ಅವರು ದಂಡವನ್ನು ಕೊಡತಕ್ಕ ಸ್ಥಿತಿಯಲ್ಲಿ ಇಲ್ಲ. ಈ ಅನ್ಯಾಯವನ್ನು ಸರಿಪಡಿಸಬೇಕಾದರೆ ಲೈಸೆನ್ಸ್‌ಗೆ ಅರ್ಜಿಯನ್ನು ಹಾಕಿದ ಒಂದು ತಿಂಗಳೊಳಗಾಗಿ ಲೈಸೆನ್ಸ್ ಕೊಡಬೇಕು. ಇಲ್ಲದಿದ್ದರೆ ಇವರ ಜಮೀನಿನಲ್ಲಿ ಇರತಕ್ಕಂತಹ ಮರಗಳನ್ನು ಕಡಿಯುವುದಕ್ಕೆ ಕಾನೂನಿನಲ್ಲಿ ತಕ್ಕ ಅವಕಾಶವನ್ನು ಅಳವಡಿಸಬೇಕು. ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

2-30 ಪಿ. ಎಂ.

† ಶ್ರೀ ಎಚ್. ವಿಶ್ವನಾಥ್ (ಕೆ. ಆರ್. ನಗರ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈ ಮರಗಳ ಸಂರಕ್ಷಣೆ ಕಾನೂನಿಗೆ ತಿದ್ದುಪಡಿಯನ್ನು ಮಾಡುತ್ತಿದ್ದಾರೋ ಈ ತಿದ್ದುಪಡಿ ಬಹುಶಃ ಮತ್ತೆ ಬಡ ರೈತನ ಮೇಲೆ ಇನ್ನೂ ಒಂದು ಹೊರೆಯನ್ನು ಸರ್ಕಾರ ಹೊರಿಸುತ್ತಾ ಇದೆ ಎನ್ನುವುದು ನನ್ನ ಭಾವನೆ. ಏಕೆಂದರೆ, ನನ್ನ ಕ್ಷೇತ್ರದಲ್ಲಿ ಈ ಸೌದೆಗಾಗಿ ಪಡತಕ್ಕ ಬವಣೆ ಬಗ್ಗೆ ಹೇಳಬೇಕು ಎಂದರೆ ಒಂದು ಲಕ್ಷದ 70 ಸಾವಿರದ ಪ್ರಜಾ ಸಂಖ್ಯೆ ಇರತಕ್ಕ ನಮ್ಮ ಕ್ಷೇತ್ರ ಸೌದೆ ಸರಬರಾಜಿನ ಬಗ್ಗೆ ಕೇಳಿದ ಪ್ರಶ್ನೆಗೆ ತಾವು ಕೊಟ್ಟಿರುವ ಉತ್ತರದ ಪ್ರಕಾರ 1200 ಟನ್ ಇಷ್ಟು ಕಡಿಮೆ ಸೌದೆಯನ್ನು ಕೊಟ್ಟು ಮರಗಳನ್ನು ಕಡಿಯಬೇಡಿ ಎಂದು ಹೇಳಿದರೆ ಅದು ಎಷ್ಟರಮಟ್ಟಿಗೆ ಯೋಗ್ಯ ಎನ್ನುವುದನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕು ಎಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಒಂದೊಂದು ಕ್ಷೇತ್ರಕ್ಕೂ ಅಂದರೆ ತಾಲ್ಲೂಕು ಕೇಂದ್ರದಲ್ಲಿ ಒಂದೊಂದೇ ಸೌದೆ ಡಿಪೋವನ್ನು ತೆಗೆದಿದ್ದೀರಿ. ಒಂದು ಲಕ್ಷ, ಎರಡು ಲಕ್ಷ ಪ್ರಜಾ ಸಂಖ್ಯೆ ಇರುವ ಕಡೆ ಒಂದೇ ಒಂದು ಸೌದೆ ಡಿಪೋ ತೆಗೆದು, ರೈತನಿಗೆ ತನ್ನ ಹೊಲದಲ್ಲಿರತಕ್ಕ ಮರವನ್ನು ಕಡಿಯಬೇಡಿ ಎಂದು ಹೇಳಿದರೆ ಎಷ್ಟು ತೊಂದರೆಯಾಗುತ್ತದೆ ಎನ್ನುವುದನ್ನು ಗಮನಿಸಬೇಕು. ಕ್ಷೇತ್ರದ ಗಡಿ ಭಾಗದಿಂದ ರೈತ ಬರಬೇಕಾದರೆ ೩೦ ಕಿಲೋಮೀಟರ್ ಆಗುತ್ತದೆ ಇಷ್ಟು ದೂರ ಗಾಡಿ ಕಟ್ಟಿಕೊಂಡು ಬಂದರೂ ಸೌದೆ ಸಿಕ್ಕದೇಹೋದರೆ ರೈತನಿಗೆ ನಿರಾಶೆಯಾಗುತ್ತದೆ. ಈ ಕಾನೂನಿನಿಂದ ರೈತನ ಬವಣೆ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಆದುದರಿಂದ ತಾವು

ಸರ್ಕಾರದವರು ಪ್ರತಿ ಹೋಬಳಿ ಕೇಂದ್ರದಲ್ಲಿ ಅರಣ್ಯ ಇಲಾಖೆಯ ವತಿಯಿಂದ ಒಂದೊಂದು ಸೌದೆ ಡಿಪೋ ತೆಗೆದು, ನಂತರ ಈ ಕಾನೂನನ್ನು ಜಾರಿಗೆ ಕೊಟ್ಟರೆ ಬಹುಶಃ ರೈತನಿಗೆ ಸುಗಮವಾಗುತ್ತದೆ ಎಂದು ಈ ಸದನದಲ್ಲಿ, ಮಾನ್ಯ ಅಧ್ಯಕ್ಷರ ಮೂಲಕ ನಾನು ಸರ್ಕಾರಕ್ಕೆ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೈಸೂರು ಜಿಲ್ಲೆಯಲ್ಲಿ ಅಂದರೆ ಪಿರಿಯಾಪಟ್ಟಣ ಹುಣಸೂರು, ಕೆ.ಆರ್. ನಗರ ಹೆಗ್ಗಡದೇವನ ಕೋಟೆ, ಗೂಡ್ಲುಪೇಟೆ ತಾಲ್ಲೂಕುಗಳಲ್ಲಿ ಲಕ್ಷಾಂತರ ರೂಪಾಯಿ ವಿದೇಶಿವಿನಿಮಯ ಗಳಿಸಿಕೊಡತಕ್ಕ ಹೊಗೆ ಸೊಪ್ಪನ್ನು ಬೆಳೆಯುತ್ತಾರೆ. ಹೊಗೆಸೊಪ್ಪನ್ನು ಬೇಯಿಸುವುದಿಕ್ಕೆ ಸೌದೆ ಬೇಕೆಬೇಕು. ಹಳ್ಳಿಯಲ್ಲಿರತಕ್ಕ ಮರಗಳನ್ನು ಕಡಿಯುವುದಕ್ಕೆ ತಮ್ಮ ಕಾನೂನಿಂದ ಸಾಧ್ಯವಾಗುತ್ತಾ ಇಲ್ಲ ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಲಕ್ಷಾಂತರ ರೂಪಾಯಿಗಳ ವಿದೇಶಿವಿನಿಮಯ ಗಳಿಸತಕ್ಕ ಹೊಗೆಸೊಪ್ಪಿನ ಬೆಳೆಗಾರರು ಸೌದೆಯ ಬವಣೆಯನ್ನು ತೀವ್ರತರವಾಗಿ ಅನುಭವಿಸುತ್ತಿದ್ದಾರೆ. ಹೀಗಾಗಿ ಈ ಕಾನೂನಿನಿಂದ ರೈತರ ಮೇಲೆ ಪರೋಕ್ಷವಾಗಿ ಇನ್ನಷ್ಟು ಹೊರೆಯನ್ನು ಹೇರುತ್ತಾ ಇದೆ ಎನ್ನುವ ವಿಷಯವನ್ನು ಹೇಳುತ್ತಾ, ಈ ರೈತರ ಬವಣೆಯನ್ನು ತಪ್ಪಿಸತಕ್ಕಂಥ ಏರ್ಪಾಡನ್ನು ಈ ಕಾನೂನಿನಲ್ಲಿ ತರಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಡಿದಾಳ್ ದಿವಾಕರ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ. ಮಾನ್ಯ ಅರಣ್ಯ ಶಾಖೆಯ ಮಂತ್ರಿಗಳು ಟೀ ಪ್ಲಾಂಟೇಷನ್‌ಗೆ ವಿನಾಯಿತಿ ಕೊಡಬೇಕು ಎಂದು ಹೇಳಿದ್ದಾರೆ. ಅದು ನಿಜ ಇರಬಹುದು ಇದೇ ರೀತಿ ವಿನಾಯಿತಿಯನ್ನು ಅಡಿಕೆ ತೋಟಕ್ಕೂ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಅಡಿಕೆ ಬೇಯಿಸವುದಕ್ಕೆ ಮಲೆನಾಡು ಪ್ರಾಂತದಲ್ಲಿ ಬಹಳ ತೊಂದರೆಯಾಗಿದೆ. ಅಡಿಕೆಯನ್ನು ಬೇಯಿಸದೇ ಬೇರೆ ದಾರಿಯಿಲ್ಲ, ಕಟ್ಟಿಗೆ ಇಲ್ಲದೆ ಅಡಿಕೆಯನ್ನು ಬೇಯಿಸುವುದಕ್ಕೆ ಆಗುವುದಿಲ್ಲ. ಅಲ್ಲದೆ ಫೆಲ್ಲಿಂಗ್ ಪರ್ಮಿಷನ್ ಕೊಡದೆ ಅನೇಕಸಾರಿ ತೊಂದರೆಯಾಗಿರುವುದು ಜಾಸ್ತಿ ಇದೆ. ಉದಾಹರಣೆಗೆ ಹೇಳುವುದಾದರೆ ಫೆಲ್ಲಿಂಗ್ ಪರ್ಮಿಷನ್‌ಗೆ ಹಾಕಿದರೆ ಅಧಿಕಾರಿಗಳು ಕೊಡುವುದಕ್ಕೆ ವರ್ಷಾನುಗಟ್ಟಲೆ ತಡವಾಗುತ್ತದೆ. ಮರ ಬೀಳುವಂಥ ಸಂದರ್ಭ ಬಂದು ಮರಗಳು ಬಿದ್ದು ನಷ್ಟವಾಗಿವೆ. ನನ್ನ ಕ್ಷೇತ್ರದಲ್ಲಿ ಒಂದು ಮರ ಬೀಳತಕ್ಕಂಥ ಸಂದರ್ಭವಿತ್ತು. ಅಧಿಕಾರಿಗಳಿಗೆ ಫೆಲ್ಲಿಂಗ್ ಪರ್ಮಿಷನ್‌ಗೆ ಹಾಕಿದರು. ಫೆಲ್ಲಿಂಗ್ ಪರ್ಮಿಷನ್ ಅಧಿಕಾರಿಗಳು ಕೊಡುವುದರೊಳಗೆ ಆ ಮರ ಮನೆಯ ಮೇಲೆ ಬಿದ್ದು ಆ ಮನೆಗೆ ಜಖಂ ಆಯಿತು. ಇದರಲ್ಲಿ ದೊಡ್ಡ ವಿಶೇಷವೇನೆಂದರೆ, ಆಗ ಜನರಾರು ಇರಲಿಲ್ಲ, ಜನರಿಗೇನೂ ತೊಂದರೆಯಾಗಲಿಲ್ಲ. ಇಂತಹ ತೊಂದರೆಗಳು ಅನೇಕ ಸಂದರ್ಭದಲ್ಲಿ ಆಗುತ್ತವೆ. ಆದುದರಿಂದ ಆದಷ್ಟು ಜಾಗ್ರತೆ ಫೆಲ್ಲಿಂಗ್ ಪರ್ಮಿಷನ್ ಕೊಡುವಂಥ ವ್ಯವಸ್ಥೆ ಮಾಡಬೇಕು. ತೊಂದರೆಯಾಗುವ ಸಂದರ್ಭದಲ್ಲಾದರೂ ಹೇಳಿದರೆ ಅಧಿಕಾರಿಗಳು ಮರವನ್ನು ಕಡಿಯುವುದಕ್ಕೆ ತಕ್ಷಣ ಅವಕಾಶಕೊಡಬೇಕು. ಅಡಿಕೆ ಬೆಳೆಗಾರರಿಗೆ ನಿಮ್ಮ ಪರ್ಮಿಷನ್‌ಗೆ ಕಾಯದೆ ಮರಗಳನ್ನು ಕಡಿದು ತಮ್ಮ ತೋಟವನ್ನು ರಕ್ಷಣೆಮಾಡಿಕೊಳ್ಳುವುದಕ್ಕೆ ತಾವು ಅನುಕೂಲ ಮಾಡಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈಗ ಎಂ. ಆರ್. ಪಿ. ಯನ್ನು ನಿಲ್ಲಿಸಿದ್ದೀರಿ. ನಮ್ಮ ಜನರು ಮುಖ್ಯವಾಗಿ ಮಲೆನಾಡಿನಲ್ಲಿರತಕ್ಕ ಜನರು ಬಡ ಜನರು; ಅವರು ಟಿಂಬರ್ ಡಿಪೋಗಳಿಗೆ ಹೋಗಿ ಹರಾಜಿನಲ್ಲಿ ಮರಗಳನ್ನು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ. ಫೆಲ್ಲಿಂಗ್ ಪರ್ಮಿಷನ್‌ಗೆ, ಮಾಫಿ ಲೈಸನ್ಸಿಗೆ ವರ್ಷಾನುಗಟ್ಟಲೆ ತಿರುಗಾಡಿದರೂ ಸಿಕ್ಕುವುದಿಲ್ಲ. ಆದುದರಿಂದ ಇದು ಯಾವುದನ್ನೂ ಅನ್ವಯಿಸದೆ ಅವನ ಸ್ವಂತ ಜಮೀನಿನಲ್ಲಿ ನಾಟಿಗೆ ಪರ್ಮಿಷನ್ ಕೊಡಬೇಕು. ಟೀ ತೋಟಕ್ಕೆ ಯಾವರೀತಿ ವಿನಾಯಿತಿ ಕೊಟ್ಟಿದ್ದೀರೋ ಅದೇರೀತಿ ಈ ಅಡಿಕೆ ತೋಟಗಳಿಗೂ ವಿನಾಯಿತಿಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ಅರಣ್ಯವನ್ನು ರಕ್ಷಣೆ ಮಾಡಲೇಬೇಕು. ಇದರ ಬಗ್ಗೆ ಹೇಳುವಾಗ ತಮಗೆ ಬೇಜಾರಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ; ಆದರೆ ಇದು ಸತ್ಯ. ಅರಣ್ಯ ಇಲಾಖೆಯವರ ಜೊತೆಯಲ್ಲಿ ನಿಮ್ಮ ಅಧಿಕಾರಿಗಳು ಶಾಮೀಲಾಗಿ ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಅರಣ್ಯದ ಮಾಲು ಕಳ್ಳಸಾಗಾಣಿಕೆಯಾಗುತ್ತಾ ಇದೆ. ನಮ್ಮದು ಶ್ರೀಗಂಧ ಹೆಚ್ಚಾಗಿರುವ ಭಾಗ. ವಿಪರೀತ ಶ್ರೀಗಂಧ ನಮ್ಮ ಭಾಗದಲ್ಲಿದೆ. ಅದು ಇವತ್ತಿನ ದಿವಸ ಕಳ್ಳಸಾಗಾಣಿಕೆಯಾಗುತ್ತಾ ಇದೆ. ಅರಣ್ಯದಲ್ಲಿ ಈ ಮರಗಳನ್ನು ಕಡಿದು ಸಾಗಿಸುತ್ತಾ ಇದ್ದಾರೆ. ನಿಮ್ಮ ಅಧಿಕಾರಿಗಳು ಇವರ ಜೊತೆ ಶಾಮೀಲಾಗಿ ಈ ಕೆಲಸವನ್ನು ಮಾಡುತ್ತಿದ್ದಾರೆ. ಆದುದರಿಂದ ಮೊದಲು ಕಳ್ಳಸಾಗಾಣಿಕೆದಾರರಿಗೆ ನಿಮ್ಮ ಅಧಿಕಾರಿಗಳು ಶಾಮೀಲಾಗಿ ಅವರಿಗೆ ಪ್ರೋತ್ಸಾಹ ಕೊಡುವುದನ್ನು ತಪ್ಪಿಸಿ, ಸಣ್ಣ ರೈತರಿಗೆ ಬೇಕಾದಂಥ ಮರಗಳನ್ನು ಕಡಿದುಕೊಳ್ಳುವುದಕ್ಕ ಅವಕಾಶಕೊಡಿ, ಕಳ್ಳತನದಿಂದ

ಮರ ಕಡಿಯುವುದನ್ನು ತಪ್ಪಿಸಿ ಎಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನು ಮುಗಿಸುತ್ತೇನೆ.

† ಶ್ರೀ ಜಿ. ರಾಜುಗೌಡ (ಹಾನೂರ್).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಅರಣ್ಯ ಖಾತೆಯ ಸಚಿವರು ಸದನದ ಮುಂದೆ ಮಂಡಿಸಿರತಕ್ಕ ಮರಗಳ ಸಂರಕ್ಷಣಾ ತಿದ್ದುಪಡಿ ವಿಧೇಯಕಕ್ಕೆ ನಾನು ಬೆಂಬಲ ಕೊಡುತ್ತಾ, ಒಂದೆರಡು ತಿದ್ದುಪಡಿಗಳನ್ನು ಸೂಚಿಸಲು ಇಷ್ಟಪಡುತ್ತೇನೆ. ಮಾನ್ಯ ಸಚಿವರು ಈ ವಿಧೇಯಕವನ್ನು ಮಂಡಿಸುತ್ತಾ ಅರಣ್ಯವನ್ನು ಕಾಪಾಡತಕ್ಕ ಒಂದು ಸದುದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೇವೆ ಎಂದು ಹೇಳಿದರು. ಬಹಳ ಸಂತೋಷ. ಆದರೆ ಇವತ್ತಿನದಿವಸ ನಿಜವಾಗಲೂ ತಾವು ಮಾಡಿರತಕ್ಕ ಈ ಒಂದು ಕಾನೂನಿನಲ್ಲಿ ಒಬ್ಬ ಮನುಷ್ಯ ನ್ಯಾಯಬದ್ಧವಾಗಿ, ಕಾನೂನು ಬದ್ಧವಾಗಿ ತನ್ನ ಸ್ವಂತ ಉಪಯೋಗಕ್ಕೆ ಸೌದೆಯನ್ನು ಯಾವರೀತಿ ತರಬೇಕು ಎಂದು ಕೇಳಿದರೆ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸೌದೆ ಡಿಪೋಗಳನ್ನು ಪ್ರಾರಂಭ ಮಾಡಿದ್ದೇವೆ, ರೈತರು ತಮ್ಮ ಸ್ವಂತ ಉಪಯೋಗಕ್ಕೆ ಡಿಪೋಗಳಿಂದ ಪಡೆದುಕೊಳ್ಳಬಹುದು ಎಂದು ಹೇಳುತ್ತಾರೆ. ನನ್ನ ತಾಲ್ಲೂಕಿನ ಬಗ್ಗೆ ಹೇಳುವುದಾದರೆ, ನನ್ನ ತಾಲ್ಲೂಕಿನ ಕೊನೆ ೬೦ ಮೈಲಿ ದೂರ ಇದೆ, ಅಲ್ಲಿ ಡಿಪೋ ಇದೆ. ನನ್ನ ತಾಲ್ಲೂಕಿನಿಂದ ೬೦ ಮೈಲಿ ದೂರದಲ್ಲಿರುವ ಸೌದೆ ಡಿಪೋಗೆ ಪ್ರತಿನಿತ್ಯ ಹೋಗಿ ಸೌದೆಯನ್ನು ಕೊಂಡುಕೊಳ್ಳಲಿಕ್ಕೆ ಆಗುತ್ತದೆಯೇ? ನಾವು ಅಲ್ಲಿ ಆಗಾಗ್ಗೆ ಸೌದೆ ಡಿಪೋಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಮಾನ್ಯ ಸಚಿವರು ಒಂದು ವರ್ಷದಿಂದ ಭರವಸೆಯನ್ನು ನೀಡಿದರೂ ಸಹ ಸೌದೆ ಡಿಪೋಗಳನ್ನು ಅಲ್ಲಲ್ಲಿ ಪ್ರಾರಂಭ ಮಾಡಲಿಲ್ಲ. ಇವತ್ತಿನದಿವಸ ನಮ್ಮ ಸರ್ಕಾರದ ಕಣ್ಣಿಗೆ ಟೀ ಪ್ಲಾಂಟೇಷನ್ ಮಾತ್ರ ಬಿದ್ದಿದೆ, ಬೇರೆಯದು ಬಿದ್ದಿಲ್ಲ. ಟೀ ಪ್ಲಾಂಟೇಷನ್‌ಗೆ ಮಾತ್ರ ಸರ್ಕಾರದವರು ವಿನಾಯಿತಿ ಕೊಡಬೇಕು ಎಂದು ಹೇಳುತ್ತಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಸಾವಿರಾರು ಜನ ಸಿಲ್ಕ್ ರೀಲಿಂಗ್ ಮಾಡಿ ಬದಕುತ್ತಿದ್ದಾರೆ. ಸಿಲ್ಕ್ ರೀಲಿಂಗ್ ಮಾಡುವುದಕ್ಕೆ ಸೌದೆ ಇಲ್ಲದೆ ಆಗುವುದಿಲ್ಲ.

ಗೃಹ ಕೈಗಾರಿಕೆಯಲ್ಲಿ ಅನೇಕ ಸಾವಿರಾರು ಜನರು ತೊಡಗಿದ್ದಾರೆ. ಅರಣ್ಯ ಸಂರಕ್ಷಣೆ ಮಾಡಬೇಕೆಂದು ತಾವು ಹೊರಟಿರುವಾಗ ತಮ್ಮ ಕೈಯನ್ನು ಬಲಪಡಿಸುತ್ತೇನೆ. ಆದರೆ ತಾನು ಸ್ವಂತವಾಗಿ ಮರಗಳನ್ನು ತನ್ನ ಸ್ವಂತ ಜಮೀನಿನಲ್ಲಿ ಬೆಳೆಸಿ ತನ್ನ ಸಿಲ್ಕ್ ರೀಲಿಂಗ್ ಇಂಡಸ್ಟ್ರೀಗೆ ಬೇಕಾಗುವ ಮರಗಳನ್ನು ಕಡಿದುಕೊಂಡು ತನ್ನ ಉದ್ಯಮಕ್ಕೆ ತೊಡಗಿಸಲು ಅನುಕೂಲವಾಗುವಂತೆ ತಾವುವ್ಯವಸ್ಥೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಸೋಮಪ್ಪ (ಕೂಡ್ಲಿಗಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳವರು ತಂದಿರತಕ್ಕ ಈ ಬಿಲ್ಲನ್ನು ಅನುಮೋದನೆ ಮಾಡುತ್ತಾ ಅನೇಕ ಶಾಸಕರುಗಳು ಹೇಳಿದ ಪ್ರಕಾರ ಹಳ್ಳಿಗಾಡಿನ ಜನರ ಸಮಸ್ಯೆಯನ್ನು ಆದಷ್ಟು ಮಟ್ಟಿಗೆ ಬಗೆಹರಿಸಿದಂತೆ ಕಾಡು ಬರುತ್ತಿಲ್ಲ. ಏತಕ್ಕೆಂದರೆ ಈ ಡಿಪೋಗಳನ್ನು ತಾಲ್ಲೂಕ್ ಲೆವೆಲ್‌ನಲ್ಲಿ, ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ, ದೊಡ್ಡ ದೊಡ್ಡ ಊರುಗಳಲ್ಲಿ ಮಾಡಿರಬಹುದು ಆದರೆ ಎಲ್ಲಾ ಹಳ್ಳಿಗಳಲ್ಲಿ ಡಿಪೋಗಳನ್ನು ತೆಗೆಯತಕ್ಕ ಕೆಲಸವನ್ನು ಸರ್ಕಾರದವರಿಂದ ಮಾಡಲಿಕ್ಕೆ ಆಗಿಲ್ಲ. ಆದುದರಿಂದ ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕಾಗುತ್ತದೆ. ತಮಗೆ ಬೇಕಾಗತಕ್ಕ ಕಟ್ಟಿಗೆಗೆ ಬದಲು ರೈತರನ್ನು ಸಹ ಗೊಬ್ಬರ ಗ್ಯಾಸ್ ಉಪಯೋಗಿಸಿಕೊಳ್ಳಿ ಎಂದು ಹೇಳಿದರೆ ಅದು ಸರಿಹೋಗುವುದಿಲ್ಲವೆಂದು ಹೇಳಬಯಸುತ್ತೇನೆ. ಮರ ಕಡಿಯಬಾರದು ಎನ್ನುವ ಒಂದೇ ಒಂದು ಉದ್ದೇಶದಿಂದ ಅದರಲ್ಲಿ ಯಾವ ಯಾವ ಮರಗಳು ಎನ್ನುವ ವಿಶ್ಲೇಷಣೆಯನ್ನೂ ಸಹ ತಾವು ಕೊಟ್ಟಿಲ್ಲ. ‘ಏತಕ್ಕೆಂದರೆ ಕೆಲವು ಜಾತಿಯ ಮರಗಳು ಇವೆ, ಈ ಮುಳ್ಳು ಜಾಲಿ ಮರದಿಂದ ಸಣ್ಣ ಪುಟ್ಟ ಕಟ್ಟಿಗೆಯನ್ನು ಪಡೆಯಬಹುದಾಗಿದೆ. ಅದರಲ್ಲಿ ಸ್ವಲ್ಪ ದೊಡ್ಡ ಮರಗಳೂ ಸಹ ಇವೆ. ರೈತರು ತಮ್ಮ ಜಮೀನಿನ ಸುತ್ತಮುತ್ತಲಿರತಕ್ಕಂಥ ಅಂಥಾ ಮರಗಳನ್ನೇನಾದರೂ ಕಡಿದುಕೊಂಡು ಬಂದರೆ, ಅಥವಾ ಲಂಬಾಣಿ ಜನರಾಗಲೀ ಅಥವಾ ಬಡವರಾಗಲೀ ಅಂಥಾ ಮರವನ್ನು ಕಡಿದು ಆಕಸ್ಮಾತ್ ಪೇಟೆಗೆ ತಂದರೆ ಸಂಬಂಧಪಟ್ಟ ಅಧಿಕಾರಿಗಳು ಅವರನ್ನು ಹಿಡಿದು ಜೈಲಿಗೆ ಹಾಕುತ್ತಾರೆ ಹಳ್ಳಿಗಳಲ್ಲಿ ಒಂದು ಗಾದೆ ಇರುವ ಹಾಗೆ ಈಚಲು ಮರದ ಕೆಳಗೆ ಆಕಸ್ಮಾತ್ ಕುಳಿತು ಮಜ್ಜಿಗೆಯನ್ನು ಕುಡಿದರೂ ಹೆಂಡ’ ಎನ್ನುವ ಹಾಗೆ ಅವನು ಏನಾದರೂ ಜಾಲಿ ಮುಳ್ಳಿನ ಮರದಿಂದಲೋ ಅಥವಾ ಮತ್ತೆ ಇನ್ನು ಯಾವುದೇ ಇತರ ಜಾತಿ ಮರದಿಂದ ಸ್ವಲ್ಪ ಕಟ್ಟಿಗೆಯನ್ನು ಕಡಿದುಕೊಂಡು ಹೋದರೆ ಸಂಬಂಧಪಟ್ಟ ಅಧಿಕಾರಿಗಳು ಅವನನ್ನು ಹಿಡಿದುಕೊಂಡು ಕೋರ್ಟಿಗೆ ಹೋಗತಕ್ಕದ್ದನ್ನು ನೋಡಿದರೆ, ಅವರು ಯಾವ ಮರ

ದಿಂದ ಕಡಿದಿದ್ದಾರೆ ಎಂಬುದನ್ನು ಪರಿಶೀಲಿಸವೆ? ಆ ರೀತಿ ತೊಂದರೆ ಕೊಡುವುದು ಸರಿಯೇ? ಆದರೆ ಅದೇ ಅಧಿಕಾರಿಗಳು ಶ್ರೀಗಂಧದ ಮರವನ್ನು ಕಾರುಗಳ ಡಿಕ್ಕಿಗಳಲ್ಲಿ ಹಾಕಿಕೊಂಡು ಹೋಗುತ್ತಿದ್ದರೂ ಸುಮ್ಮನೇ ಇರುತ್ತಾರೆ. ಉದಾಹರಣೆಗೆ ನಮ್ಮ ಸೊಂಡೂರು ಕಡೆಗಳಲ್ಲಿ ಪ್ರತಿನಿತ್ಯ ೨-೩ ದಿವಸಗಳಿಗೊಮ್ಮೆ ಕಾರುಗಳಲ್ಲಿ ೨೦, ೩೦ ಸಾವಿರ ರೂ. ಗಳ ಬೆಲೆ ಬಾಳುವ ಮರಗಳನ್ನು ಹಾಕಿಕೊಂಡು ಹೋದರೂ ಸುಮ್ಮನೇ ಇದ್ದು ಅದೇ ಸಾಮಾನ್ಯ ಬಡ ಜನತೆ ತಲೆಮೇಲೆಯೋ ಇಲ್ಲ ಬಾಡಿಗಳಲ್ಲಿಯೋ ಸೌದೆಯನ್ನು ತೆಗೆದುಕೊಂಡು ಹೋಗುತ್ತಿದ್ದರೆ ಅದು ಮಾತ್ರ ಈ ಅಧಿಕಾರಿಗಳ ಕಣ್ಣಿಗೆ ಬೀಳುತ್ತದೆ ಅನು ಬೀಳುವುದಿಲ್ಲವೇ? ೩೦-೪೦ ಸಾವಿರ ರೂ. ಗಳ ಕಳ್ಳ ಮಾಲು ಸಾಗುತ್ತಿರುವಾಗ ಕಣ್ಣಿಗೆ ಬೀಳದಿದ್ದುದು ಕೇವಲ ೪೦ ಪೈಸೆ ಇಲ್ಲ ೪೦ ರೂ. ಗಳ ಸೌದೆಯನ್ನು ತೆಗೆದುಕೊಂಡು ಹೋಗುತ್ತಿದ್ದರೆ ಅಂಥವರನ್ನು ಹಿಡಿದು ಕೋರ್ಟಿಗೆ ಹಾಕುವುದು ನ್ಯಾಯವೇ? ಇದನ್ನು ಬಹುಶಃ ನೋಡಿದರೆ ಅಧಿಕಾರಿಗಳು ಅವರ ಜೊತೆಯಲ್ಲಿ ಶಾಮೀಲಾಗಿದ್ದಾರೆಂದು ಅನ್ನಿಸುತ್ತದೆ. ಹಳ್ಳಿಗಾಡಿನಲ್ಲಿರುವ ಜನ ಪ್ರತಿ ದಿವಸದ ಅಡಿಗೆಗೋಸ್ಕರ ತೊಗರಿ, ಹತ್ತಿಯಂಥ ಕಟ್ಟಿಗೆಯನ್ನು ಯಾವಾಗಲೂ ಉಪಯೋಗಿಸುವುದಕ್ಕೆ ಸಿಕ್ಕುವುದಿಲ್ಲ, ಅದಕ್ಕೋಸ್ಕರ ತನ್ನ ಜಮೀನಿನ ಸುತ್ತಮುತ್ತ ಬೆಳೆದಿರತಕ್ಕಂಥ ಈ ಕೆಟ್ಟ ಜಾಲಿ ಮುಳ್ಳಿನ ಮರ ಮುಂತಾದ ಚಿಕ್ಕ ಪುಟ್ಟ ಮರಗಳಿಂದಲೂ ಕೂಡ ತಾವು ಕಡಿಯಕೂಡದೆಂದು ಆಜ್ಞೆ ಮಾಡಿ ಅವರುಗಳಿಗೆ ಡಿಪೋಗಳ ಮೂಲಕ ಒದಗಿಸುತ್ತೇವೆಂದು ಹೇಳುವುದು ಸುಳ್ಳು. ಆದುದರಿಂದ ತನ್ನ ದಿನನಿತ್ಯ ಅನುಕೂಲಕ್ಕಾಗಿ ಸಣ್ಣ ಪುಟ್ಟ ಮರಗಳನ್ನು ಕಡಿದುಕೊಂಡು ಬರುವುದಕ್ಕೆ ಈ ಕಾನೂನಿನಲ್ಲಿ ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳವರು ತಂದು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎನ್. ಕೆಂಗೇಗೌಡ (ಚಾಮರಾಜ ನಗರ).—ಮಾನ್ಯ ಅಧ್ಯಕ್ಷರೇ ಮೈಸೂರು ನಗರ ಕಾಡಿಗೆ ಹತ್ತಿರವಿದ್ದರೂ ಸಹ ಮೈಸೂರು ನಗರದಲ್ಲಿ ಸೌದೆಯ ಅಭಾವ ಉಂಟಾಗಿದೆ. ಸೌದೆ ಬಂದರೂ ಕೂಡ ಬೆಲೆ ವಿಪರೀತವಾಗಿ ಹೆಚ್ಚಾಗುತ್ತಿದೆ. ಇದರಿಂದ ಅಲ್ಲಿಯ ಜನತೆಗೆ ಸೌದೆಯ ಒಂದು ಹಾಹಾಕಾರ ಉಂಟಾಗಿದೆ. ಮೈಸೂರು ನಗರದ ಹತ್ತಿರವಿರುವ ಹೆಗ್ಗಡದೇವನಕೋಟೆಯಲ್ಲೂ ಕೂಡ ಸಾಕಷ್ಟು ಸೌದೆ ದೊರೆಯುತ್ತಿಲ್ಲ. ಮತ್ತೆ ತಮ್ಮ ಏನೊಂದು ಸೊಸೈಟಿಗಳಿವೆ, ಡಿಪೋಗಳಿವೆ ಅವುಗಳ ಮುಖಾಂತರವಾಗಿಯೂ ಕೂಡ ಸೌದೆ ಸಾಕಷ್ಟು ಪ್ರಮಾಣದಲ್ಲಿ ಮಾರಾಟವಾಗುತ್ತಿಲ್ಲ, ಅಷ್ಟು ಸಮರ್ಪಕವಾಗಿಲ್ಲ. ಮೈಸೂರು ನಗರದಲ್ಲಿ ಈಗ ೫ ಲಕ್ಷ ಜನಸಂಖ್ಯೆಯಾಗಿದೆ ಅದಕ್ಕೆ ತಕ್ಕಂಗೆ ಸರ್ಕಾರದವರು ಮೈಸೂರು ನಗರಕ್ಕೆ ಸಾಕಷ್ಟು ಮಟ್ಟದಲ್ಲಿ ಮತ್ತು ಸುಲಭವಾದ ಬೆಲೆಯಲ್ಲಿ ಸೌದೆ ಸಿಗುವ ರೀತಿಯಲ್ಲಿ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹಳ್ಳಿಗಾಡಿನ ಜನರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಅಲ್ಲಿ ಪರವಾನಿಗೆ ಪಡೆಯಬೇಕಾದರೆ ಬಹಳ ಕಷ್ಟವಿದೆಂದು ಹೇಳಿದರು. ಶ್ರೀಮಾನ್ ಶಿವರುದ್ರಪ್ಪನವರು ತಮಗೇನೇ ಪರವಾನಿಗೆ ಪಡೆಯಲು ಅರ್ಜಿ ಹಾಕಿ ೧ ವರ್ಷದ ಮೇಲೆ ೩ ತಿಂಗಳಾದರೂ ಪರವಾನಿಗೆ ಸಿಕ್ಕದೇ ಅದು ಇನ್ನೂ ಪರಿಶೀಲನೆಯ ಮಟ್ಟದಲ್ಲಿದೆಯೆಂದು ತಿಳಿಸಿದರು. ಇನ್ನು ಸಾಮಾನ್ಯ ಜನರ ಪರಿಸ್ಥಿತಿ ಏನು ಎಂಬುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಅದಕ್ಕೆ ನನ್ನ ಸಲಹೆ ಏನೆಂದರೆ ಹೋಬಳಿ ಲೆವೆಲ್‌ನಲ್ಲಿಯೇ ಯಾವ ಒಂದು ರೆವಿನ್ಯೂ ಇನ್ಸ್‌ಪೆಕ್ಟರವರು ಇರುತ್ತಾರೋ ಅವರ ಮುಖಾಂತರವೇ ಅರ್ಜಿಗಳನ್ನು ತರಿಸಿಕೊಂಡು, ಅವರೇ ಅಲ್ಲಿಯೇ ಅದನ್ನು ಪರಿಶೀಲನೆ ಮಾಡಿ ಪರವಾನಿಗೆ ಕೊಡುವ ವ್ಯವಸ್ಥೆ ಮಾಡಿದರೆ ಇಷ್ಟು ತಡವಾಗುವುದು ತಪ್ಪುತ್ತದೆಂದು ನನಗನಿಸುತ್ತದೆ. ಆದುದರಿಂದ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳವರೇ ಅರ್ಜಿಗಳನ್ನು ಸ್ವೀಕಾರ ಮಾಡಿ ಪ್ರೊಸೆಸ್ ಮಾಡುವುದು ಸೂಕ್ತವೆಂದು ನಾನು ಸಲಹೆ ಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಜಯದೇವರಾಜ್ ಅರಸ್ (ಚಾಮುಂಡೇಶ್ವರಿ).—ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ ಅರಣ್ಯವಿರಬೇಕೆಂದು ನಮ್ಮೆಲ್ಲರ ಕ್ಷೇಮಕ್ಕಾಗಿ ಈ ಒಂದು ಕಾನೂನನ್ನು ತಂದಿದ್ದೀರಿ. ಈಗ ಮೊದಲನೆಯದಾಗಿ ಕೆಲವರಿಗೆ ಎಗ್ಜಂಷನ್ ಕೊಟ್ಟಿದ್ದೀರಿ ಆದರೆ ಸಾಮಾನ್ಯ ಬಡ ರೈತ ತನ್ನ ಜಮೀನಿನಲ್ಲಿ ಬೆಳೆದಿರತಕ್ಕಂಥ ಮರವನ್ನು ತನ್ನ ಸ್ವಂತಕ್ಕಾಗಿ ಮರವನ್ನು ಕಡಿಯುವುದಕ್ಕೆ ಈ ಮಸೂದೆಯಲ್ಲಿ ಅವಕಾಶ ಮಾಡಿ ಕೊಟ್ಟಿಲ್ಲ. ಇವತ್ತು ಒಬ್ಬ ರೈತನು ತನ್ನ ಸ್ವಂತ ಜಮೀನಿನಲ್ಲಿರುವ ಮರವನ್ನು ಕಡಿಯಬೇಕಾದರೆ ವಿಲೇಜ್ ಅಕೌಂಟೆಂಟರ ಹತ್ತಿರ ಹೋಗಿ ಅಲ್ಲಿಂದ ತಹಶೀಲ್ದಾರ್‌ರವರ ಹತ್ತಿರ ಹೋಗಿ

ಅನಂತರ ಫಾರೆಸ್ಟ್ ಇಲಾಖೆಯವರ ಹತ್ತಿರ ಹೋಗಿ ಅಪ್ಪಣೆ ಪಡೆದು ಅನಂತರ ಕಡಿಯಬೇಕಾಗಿದೆ. ಆದುದರಿಂದ ಇನ್ನು ಮುಂದಾದರೂ ಅವರಿಗೆ ಅನಾನುಕೂಲವಾಗದಂತೆ ಇರಬೇಕಾದರೆ ದಯವಿಟ್ಟು ಇದರ ಜೊತೆಗೇ ಇನ್ನೊಂದು ತಿದ್ದುಪಡಿಯನ್ನು ತಂದು ಸಣ್ಣ ಪುಟ್ಟ ರೈತರು ತಮ್ಮ ಸ್ವಂತಕ್ಕಾಗಿ ಸೌದೆಯನ್ನು ಕಡಿದುಕೊಂಡು ಬರಲು ಯಾವ ಅಡ್ಡಿ ಅಡಚಣೆಯನ್ನುಂಟು ಮಾಡದಂತೆ ಮಾಡುವುದು ನಮ್ಮೆಲ್ಲರ ದೃಷ್ಟಿಯಲ್ಲಿ ಉತ್ತಮವೆಂದು ಕಾಣಿಸುತ್ತಿದೆ. ಇದರಿಂದ ನಿಜವಾಗಿಯೂ ರೈತನಿಗೆ ಆಗುತ್ತಿರತಕ್ಕಂಥ ಕಿರುಕುಳವನ್ನು ತಪ್ಪಿಸಿದಂತೆ ಆಗುತ್ತದೆ ಎನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟೇ ಅಲ್ಲದೇ ಈ ಸಮಯದಲ್ಲಿ ತಮಗೆ ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೈಸೂರು ಜಿಲ್ಲೆಯಲ್ಲಿಗುವ ಪಿರಿಯಾಪಟ್ಟಣದಲ್ಲಿರುವ ಕಾರ್ಖಾನೆಯವರಿಗೆ ಏನಾದರೂ ಸೌದೆ ಬೇಕಾದರೆ ತಮ್ಮ ಸ್ವಂತ ಜಮೀನಿನಲ್ಲಿ ಕಡಿಯುವುದೂ ಬಹಳ ಕಷ್ಟವಾಗಿದೆ. ತಾವು ಏನೋ ಫಾರೆಸ್ಟ್ ಕಾರ್ಪೊರೇಷನ್ನೋ ಬೋರ್ಡ್ ಅಂತಲ್ಲೋ ಏನೋ ಒಂದು ಮಾಡಿದ್ದೀರಿ ಅವರ ಮೂಲಕ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ ಅದರ ಮೂಲಕ ಸಿಕ್ಕಬೇಕಾದರೂ ಬಹಳ ಕಷ್ಟ. ಅಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪ್ರಯತ್ನ ಪಟ್ಟಾಗ್ಯೆ ಸೌದೆ ಸಿಗುತ್ತದೆ ಆದರೆ ಸಾಮಾನ್ಯ ಜನರ, ಬಡ ಜನತೆ ಸಿಕ್ಕುವುದು ಬಹಳ ಕಠಿಣವಾಗಿದೆ ಈಗ ಈ ಕಾನೂನನ್ನು ತಾವೇನುತಂದಿದ್ದೀರಿ ಅದಕ್ಕೆ ನಾವುಏನೋ ಒಪ್ಪಿಗೆ ಕೊಡುತ್ತೇವೆ ಆದರೆ ನಾವು ಜನತೆಗೆ ಉತ್ತರವನ್ನು ಕೊಡಬೇಕಾದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಇದರ ಬಗ್ಗೆ ತಾವು ಬಹಳ ದೀರ್ಘವಾಗಿ ಯೋಚನೆ ಮಾಡಿ ಇದಕ್ಕೆ ಒಪಿ ಗೆ ತೆಗೆದುಕೊಳ್ಳುವುದಕ್ಕೆ ಮುಂಚೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆಮಾಡಿ ಅದಕ್ಕೆ ಒಂದು ತಿದ್ದುಪಡಿಯನ್ನು ತರುವುದು ಒಳ್ಳೆಯದೆಂದು ಅನ್ನಿಸುತ್ತದೆ. I think my hon. Friend Mr. Arumugham will consider how best we could amend it to help the poor people. I hope he would also guide us in this matter. It is a matter which is having a great agitation on the public mind particularly the villagers. When you exempt an Estate Owner, why not a small ryot who is in the village? I am requesting the concerned Hon. Minister to consider it and do something to help these people.

ಶ್ರೀ ಜಿ. ರಾಮೇಗೌಡ (ಮಾನ್ಯ ಅರಣ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ. ಈಗ ಮಾತನಾಡಿದ ನನ್ನ ಮಾನ್ಯ ಸ್ನೇಹಿತರು ಎಲ್ಲರೂ ಕೂಡ ಬಡವರಿಗೆ ಬಹಳ ತೊಂದರೆಯಾಗಿದೆ ಎಂದು ಬಹಳ ಕಳಕಳಿಯಿಂದ ಹೇಳಿದ್ದಾರೆ. ಬಡವರು ಕಾಡಿಗೆ ಹೋಗಿ ತಲೆಯ ಮೇಲೆ ಒಂದು ಹೊರೆ ಸೌದೆಯನ್ನು ತೆಗೆದುಕೊಂಡು ಬಂದು ಮನೆಯಲ್ಲಿ ಅಡುಗೆ ಮಾಡಿದರೆ ಅದಕ್ಕೆ ಯಾವ ಅಡ್ಡಿಯೂ ಇಲ್ಲ. ಹಾಗೇನಾದರೂ ಅವರ ಮೇಲೆ ಕೇಸ್ ಹಾಕಿದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಕಾಡಿನಲ್ಲಿ ೧½ ಟನ್ ನಷ್ಟು ಸೌದೆ ಮರ ಇದ್ದರೆ ಅದನ್ನು ಕಡಿಯುವುದಕ್ಕೆ ಕಾನೂನಿನಲ್ಲಿ ಪ್ರಾವಿಷನ್ ಇದೆ. ಅದಕ್ಕೆ ಯಾವ ಅಭ್ಯಂತರವೂ ಇಲ್ಲ.

ಶ್ರೀ ಸಿ. ಅಪ್ಪಾಜಿ.—ಮಾನ್ಯ ಅಧ್ಯಕ್ಷರೇ, ನಾವೆಲ್ಲಾ ಮಾತನಾಡಿದ ಮೇಲೆ ಮಾನ್ಯ ಮಂತ್ರಿಯವರು ಆ ಬಗ್ಗೆ ಉತ್ತರ ಕೊಡಲಿ.

ಶ್ರೀ ಜಿ. ರಾಮೇಗೌಡ.— ಇನ್ನು ಮುಂದೆ ಮಾತನಾಡತಕ್ಕಂಥ ನನ್ನ ಮಾನ್ಯ ಸ್ನೇಹಿತರು ಇದನ್ನು ರಿಪೀಟ್ ಮಾಡದೇ ಇರಲಿ ಎಂದು ನಾನು ಹೇಳುತ್ತಿದ್ದೇನೆ. ಇಲ್ಲಿಯವರೆಗೆ ಮಾತನಾಡಿದ ಪ್ರತಿಯೊಬ್ಬ ಮಾನ್ಯ ಸದಸ್ಯರು ಇದನ್ನು ಹೇಳಿದ್ದಾರೆ. ಬಡವರು ಮನೆಯ ಕೆಲಸಕ್ಕಾಗಿ, ಎತ್ತಿನಗಾಡಿ ಸಾಮಾನಿಗಾಗಿ ೨ ಕ್ಯುಬಿಕ್ ಮೀಟರ್‌ನಷ್ಟು ಸೌದೆಯನ್ನು ಕಾಡಿನಿಂದ ತರಬಹುದು. ಅದು ಅಲ್ಲಿಗೆ ೭೦ ಸಿ. ಎಫ್. ಟಿ. ಆಗುತ್ತದೆ, ಇದರಲ್ಲಿ ಬಹುಮುಖ್ಯವಾಗಿ ಅಲ್ಲಿಂದ ೧½ ಟನ್‌ನಷ್ಟು ಸೌದೆ ತರುವುದಕ್ಕೆ ಯಾರ ಅಭ್ಯಂತರವೂ ಇಲ್ಲ. ಒಂದು ಗಾಡಿಯಲ್ಲಿ ಒಂದು ಟನ್‌ನಷ್ಟು ಸೌದೆ ಹಾಕುವುದಕ್ಕೆ ಆಗುವುದಿಲ್ಲ. ಅವರು ಗಾಡಿಯಲ್ಲಿ ಸೌದೆಯನು ತರಬೇಕಾದರೆ ಬರೀ ಸೌದೆಯನ್ನು ತರುತ್ತಾರೆಂದು ಯಾರಾದರೂ ಗ್ಯಾರಂಟಿ ಕೊಟ್ಟರೆ ಪರವಾಯಿಲ್ಲ. ಆದರೆ ಅವರು ಅದರ ಜೊತೆಯಲ್ಲಿ ಶ್ರೀಗಂಧದ ಮರಗಳನ್ನು ಮುಚ್ಚಿ ಇಟ್ಟು ತೆಗೆದುಕೊಂಡು ಬರುತ್ತಾರೆ.

• ಶ್ರೀ ಸಿ. ಅಪ್ಪಾಜಿ.— ಸ್ವಾಮಿ, ಸಾಮಾನ್ಯ ರೈತರಾರೂ ಅದನ್ನು ಕಡಿಯುವುದಿಲ್ಲ. ಯಾರೋ ಕಳ್ಳರು ಅದನ್ನು ಕಡಿಯುತ್ತಾರೆ ಅಷ್ಟೆ.

ಶ್ರೀ ಜಿ. ರಾಮೇಗೌಡ.— ಅವರು ಮಾಡುವ ತೊಂದರೆಗಳಿಂದ ಈ ತರಹ ಕಾನೂನು ತರಬೇಕಾಗುತ್ತದೆ. ಈ ಕಾನೂನನ್ನು ಒಪ್ಪಿರುವುದು ೧೯೭೭ನೇ ಇಸವಿಯಲ್ಲಿ ೧೯೭೮ನೇ ಇಸವಿಯಲ್ಲಿ ಈ ಒಂದು ಭಾಗಕೆ ಮಾತ್ರ ಅಮೆಂಡ್‌ಮೆಂಟ್ ತಂದಿರುವುದು ಇದೆ. ಟೀ ಪ್ಲಾಂಟೇಷನ್ ಅಸೋಸಿಯೇಷನ್‌ನವರಿಂದ ಬಂದಿರತಕ್ಕಂಥ ಅಪ್ಲಿಕೇಷನ್ ಮೇಲೆ ಈ ಬಗ್ಗೆ ಲಾ ಡಿಪಾರ್ಟ್‌ಮೆಂಟ್‌ನವರನ್ನು ಕನ್‌ಸಲ್ಟ್ ಮಾಡಿ ಇದನ್ನು ಮಾಡಿರುವುದು ಇದೆ. ಇದೇನೇ ಇದ್ದರೂ ಮಾನ್ಯ ಸದಸ್ಯರುಗಳು ಇದರಿಂದ ಬಡವರಿಗೆ ತೊಂದರೆಯಾಗಿದೆ ಎಂದು ದೊಡ್ಡದಾಗಿ ವಾದ ಮಾಡುವುದರಲ್ಲಿ ಹಿನ್ನೆಲೆ ಇರುತ್ತದೆ. ಆದ್ದರಿಂದ ಬಡವರಿಗೋಸ್ಕರ ನಾವು ಹೊಡೆದಾಡಬೇಕಿಲ್ಲ. ಅವರು ಕಾಡಿಗೆ ಹೋಗಿ ಸೌದೆಯನ್ನು ತರಬಹುದಾಗಿದೆ. ಅದಕ್ಕೆ ಯಾವ ಅಡ್ಡಿಯೂ ಇಲ್ಲ. ಕಾಡಿಗೆ ಹೋಗಿ ಸೌದೆ ತರುವವರಿಗೆ ನಾವು ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೇವೆ ಗಾಡಿಯವರಿಗೂ ನಾವು ವ್ಯವಸ್ಥೆ ಮಾಡಿದ್ದೇವೆ. ಪ್ರತಿಯೊಂದು ತಾಲ್ಲೂಕಿನಲ್ಲೂ ನಾವು ಡಿಪೋಗಳನ್ನು ತೆರೆದಿದ್ದೇವೆ, ಅಲ್ಲದೇ ೪ ಪಟ್ಟಣಗಳಲ್ಲಿ ಸಹ ಇದನ್ನು ತೆರೆದಿದ್ದೇವೆ, ಆದರೂ ಇದು ಸಾಲದೇ ಇರಬಹುದು. ಅಲ್ಲಲ್ಲಿ ಸಾಕಷ್ಟು ಡಿಪೋಗಳನ್ನು ತೆರೆಯುವ ವ್ಯವಸ್ಥೆ ಮಾಡುವುದಕ್ಕೆ ನಾವು ಪ್ರಯತ್ನಪಡುತ್ತೇವೆ. ಈ ಸಲಹೆಯನ್ನು ಬಿಟ್ಟು ಬೇರೆ ಸಲಹೆಗಳು ಏನಾದರೂ ಇದ್ದರೆ ಮಾನ್ಯ ಸದಸ್ಯರುಗಳು ಕೊಡಲಿ.

†ಶ್ರೀ ಬಿ. ಎ. ಮೊಹಿದ್ದೀನ್ (ಬಂಟವಾಳ).— ಮಾನ್ಯ ಅಧ್ಯಕರೇ, ಕರ್ನಾಟಕ ರಾಜ್ಯದ ಪ್ರಿಜರ್ವೇಷನ್ ಆಫ್ ಟ್ರೀಸ್ ಅಮೆಂಡ್‌ಮೆಂಟ್ ಬಿಲ್ಲಿನ ಬಗ್ಗೆ ನಾನು ನನ್ನ ಕೆಲವು ಅಭಿಪ್ರಾಯಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಇವತ್ತು ಕಾಡು ಹೋಗಿ ನಾಡು ಆಗಿದೆ, ಇದು ನಿಜ. ಕಾಡುಗಳು ನಮ್ಮ ದೇಶದ ಸಂಪತ್ತು: ಅದು ಯಥೇಚ್ಛವಾಗಿ ಇರಬೇಕಾದ್ದು ನಿಜ. ಇವತ್ತು ಈ ಕಾಡುಗಳಿಂದಾಗಿ ಸಾವಿರಾರು ಇಂಡಸ್ಟ್ರೀಸ್‌ಗಳು ನಮ್ಮ ದೇಶದಲ್ಲಿ ಇವೆ. ಕಾಡಿನಲ್ಲಿ ಬೆಳೆಯುತಕ್ಕಂಥ ಮರಗಳನ್ನು ಉಪಯೋಗಿಸಿಕೊಂಡು ಈ ಸಾವಿರಾರು ಇಂಡಸ್ಟ್ರೀಸ್‌ಗಳು ಕೆಲಸ ಮಾಡುತ್ತಿರುವುದರಿಂದ ಸಾವಿರಾರು ಜನರು ಇದರಿಂದ ಬದುಕುತ್ತಿದ್ದಾರೆ. So, this is a cylic affair. ಕಾಡಿನಲ್ಲಿ ಬೆಳೆಯುತಕ್ಕಂಥ ಮರಕ್ಕೆ ವಯಸ್ಸಾದಾಗ ಅದನ್ನು ಕಡಿಯಬೇಕು. ಅದನ್ನು ಕಡಿದು ಇಂಡಸ್ಟ್ರೀಸ್‌ಗಳಿಗೂ ಅದನ್ನು ಉಪಯೋಗಿಸಿಕೊಂಡು, ಜನಗಳಿಗೂ ಸಹ ಬಹಳ ಅಗ್ಗದ ಬೆಲೆಯಲ್ಲಿ ಸಿಗುವಂತೆ ಮಾಡಬೇಕು. ಇದು ನಮ್ಮ ಉದ್ದೇಶ. ಇದಕ್ಕಾಗಿ ಕಾಡುಗಳು ಉಳಿಯಬೇಕು. ಈ ನಮ್ಮ ಉದ್ದೇಶದಿಂದ ಇಂತಹ ಕಾನೂನುಗಳನ್ನು ನಾವು ತರುತ್ತಿದ್ದೇವೆ. ಆದರೆ ಈ ಕಾನೂನುಗಳನ್ನು ತಂದಾಗಲೂ ಕೂಡ ನಾವು ಕಾಡುಗಳನ್ನು ಉಳಿಸುವುದಕ್ಕೆ ಆಗಿಲ್ಲ. ಈ ಒಂದು ಕಾನೂನಿನ ಉಪಯೋಗವನ್ನು ಪಡೆದುಕೊಂಡು ಇವತ್ತು ಈ ಡಿಪಾರ್ಟ್‌ಮೆಂಟ್‌ನಲ್ಲಿ ಇರತಕ್ಕಂಥ ಕೆಲವರು ರೈತ ಜನಗಳಿಗೆ ಕಿರುಕುಳವನ್ನು ಕೊಡುತ್ತಿದ್ದಾರೆ. To-day, there are irritants and these irritants have become the menace to the ryots ಇವತ್ತು ಸಾಮಾನ್ಯವಾಗಿ ಒಬ್ಬ ರೈತನಿಗೆ ಟೊಬ್ಯಾಕೋ ಬ್ಯಾರನ್ ಸೌದೆ ಬೇಕಾಗುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿಯಾದ ಕೂಲಿಕಾರನು ಅಥವಾ ಕೃಷಿಕಾರನು ಇವತ್ತು ಅದರ ನಿಜವಾದ ಬೆಲೆ ಒಂದು ರೂಪಾಯಿ ಆದರೆ ಮಾರ್ಕೆಟ್‌ನಲ್ಲಿ ೫ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಇದು ಏತಕ್ಕೆ ಹೀಗಾಯಿತು ಎಂದು ಕೇಳುತ್ತೇನೆ. ನೀವು ಈ ಕಾನೂನನ್ನು ತನ್ನಿ, ನಾವು ಇದನ್ನು ಬೇಡ ಎಂದು ಹೇಳುವುದಿಲ್ಲ. ಆದರೆ ರೈತರಿಗಾಗಲೀ, ಕಾರ್ಮಿಕರಿಗಾಗಲೀ ಪಟ್ಟಣದಲ್ಲಿ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವಂಥ ವ್ಯಕ್ತಿಗಳಿಗಾಗಲೀ ನೀವು ಇವತ್ತು ಅಗ್ಗದ ಬೆಲೆಯಲ್ಲಿ ಸೌದೆಯನ್ನು ಕೊಡುವಂಥ ಮುಂಜಾಗ್ರತೆಯ ಏರ್ಪಾಡನ್ನು ಮಾಡಿದ್ದೀರಾ ? ಇಲ್ಲ. ಈ ಬಗ್ಗೆ ಮುಂಜಾಗ್ರತೆಯ ಏರ್ಪಾಡನ್ನು ಮಾಡದೇ ಇವತ್ತಿನ ದಿವಸ ನಾವು ಈ ಕಾನೂನನ್ನು ತರುತ್ತೇವೆ. ಕಾಡನ್ನು ಉಳಿಸುತ್ತೇವೆ ಎಂದು ಹೋಗುವುದಾದರೆ ನಿಜವಾಗಿಯೂ ಕೂಡ ಇದರಿಂದ ಜನಸಾಮಾನ್ಯರಿಗೆ ಉಪಯೋಗವಾಗುವುದಿಲ್ಲವೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. ೧೯೭೭ನೇ ಇಸವಿಯಲ್ಲಿ ಈ ತರದ ಕಾನೂನನ್ನು ತರಲಾಯಿತು. ಅವತ್ತು ಇದನ್ನು ತಂದಾಗ ಯಾವ ವಾತಾವರಣ ಇತ್ತು ಯಾವ ಒತ್ತಡದ ಮೇಲೆ ಆ ಕಾನೂನು ಬಂತು ಎಂಬುದು ನನಗೆ ಚೆನ್ನಾಗಿ ಗೊತ್ತು; ನನ್ನ ಮಾನ್ಯ ಸ್ನೇಹಿತರುಗಳಿಗೂ ಅದು ಗೊತ್ತು. Today what I want is that this Government should have a pragmatic approach to the problem of the people. Therefore, neccessary amendments must be made to this Bill. ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೩-೦೦ ಪಿ. ಎಂ.

† ಶ್ರೀ ಎಂ.ಸಿ. ನಾಣಯ್ಯ (ಮಡಕೇರಿ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರು ತಂದಿರುವ ತಿದ್ದುಪಡಿ ಮಸೂದೆಯನ್ನು ನಾವು ಖಂಡಿತವಾಗಿ ಒಪ್ಪಬೇಕಾದ ಪರಿಸ್ಥಿತಿಯಲ್ಲಿದ್ದೇವೆ. ಅರಣ್ಯವನ್ನು ಸಂರಕ್ಷಣೆ ಮಾಡಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಮಾನ್ಯ ಸಚಿವರಿಗೆ ಮತ್ತು ಅಧಿಕಾರಿ ವರ್ಗದವರಿಗೆ ಅರಣ್ಯವನ್ನು ಸಂರಕ್ಷಣೆ ಮಾಡುವಲ್ಲಿ ಎಷ್ಟು ನಂಬಿಕೆ ಇದೆಯೋ ಅದಕ್ಕಿಂತ ಹೆಚ್ಚಿನ ನಂಬಿಕೆ ರೈತಾಪಿ ಜನರಲ್ಲಿದೆ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅರಣ್ಯ ರಕ್ಷಣೆ ಮಾಡುವಲ್ಲಿ ಹೆಚ್ಚಿನ ನಂಬಿಕೆಯಿಟ್ಟುಕೊಂಡಿರುವ ರೈತನಿಗಿಂದು ಉರಿಸಲಿಕ್ಕೆ ಸೌದೆ ಮತ್ತು ಮನೆ ಕಟ್ಟಲಿಕ್ಕೆ ಮರ ಸಿಕ್ಕುತ್ತಾ ಇಲ್ಲ. ಮರಗಳನ್ನು ವ್ಯಾಪಾರೀ ದೃಷ್ಟಿಯಿಂದ ಉಪಯೋಗಿಸುವ ಬಗ್ಗೆ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ: ಆದರೆ ರೈತನು ತನ್ನ ಜೀವನೋಪಾಯಕ್ಕಾಗಿ ಮರಗಳನ್ನು ಉಪಯೋಗಿಸುವ ಬಗ್ಗೆ ನಿಯಮಗಳನ್ನು ಆದಷ್ಟು ಸಡಿಲಗೊಳಿಸಿ. ಮಲೆನಾಡಿನ ಪ್ರದೇಶಗಳಾದ ಕೊಡಗು, ಮಂಗಳೂರು, ಹಾಸನ ಮತ್ತು ಶಿವಮೊಗ್ಗ ಮುಂತಾದ ಕಡೆಗಳಲ್ಲಿ ಮಳೆಗಾಲದ ಪೂರ್ವದಲ್ಲೇ ಮನೆಗಳಲ್ಲಿ ಸೌದೆಯನ್ನು ಜನರು ಸಂಗ್ರಹಿಸಿಡುವರು. ಸಾಮಾನ್ಯವಾಗಿ ಒಂದು ಕುಟುಂಬಕ್ಕೆ ಕಡೆಯ ಪಕ್ಷ ೧೨–೧೩ ಟನ್ ಸೌದೆ ಬೇಕಾಗುತ್ತದೆ. ಇಂಥಾ ಪರಿಸ್ಥಿತಿ ಇರುವಾಗ, ಒಂದೂವರೆ ಟನ್ ಸೌದೆಯನ್ನು ಮಾತ್ರ ತರಲಿಕ್ಕೆ ಯಾವುದೇ ಅಪ್ಪಣೆ ಬೇಕಾಗಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ತನ್ನ ಹೊಲದಲ್ಲಿರುವ ಮರಗಳಲ್ಲಿ ಐದು ಟನ್ ಸೌದೆಯನ್ನು ಹೊರಗೆ ಸಾಗಿಸಬೇಕಾದರೆ, ಮೊದಲು ರೈತನು ಅರಣ್ಯಾಧಿಕಾರಿಗಳಿಗೆ ಮರ ಕಡೆಯಲು ಅಪ್ಪಣೆಗಾಗಿ ಅರ್ಜಿ ಹಾಕಿಕೊಳ್ಳಬೇಕು: ಆಮೇಲೆ ಅರಣ್ಯಾಧಿಕಾರಿಗಳು ಅಲ್ಲಿಗೆ ಭೇಟಿ ಕೊಟ್ಟು ಕಡಿಯಲಿರುವ ಮರಗಳ್ಯಾವುವು ಎಂಬುದನ್ನು ನೋಡಬೇಕು ನೋಡಿದಮೇಲೆ ಆಜ್ಞೆ ನೀಡಬೇಕು. ಮರ ಕಡಿದ ಮೇಲೆ ಲಾರಿಯನ್ನು ಸಿದ್ಧ ಮಾಡಬೇಕು. ಪುನಃ ಲಾರಿಯಲ್ಲಿ ಸಾಗಿಸಬೇಕಾದರೆ ಫಾರೆಸ್ಟರ್ ಅವರ ಅನುಮತಿ ಬೇಕು. ಒಂದೊಂದು ಸಂದರ್ಭದಲ್ಲಿ ಲಾರಿ ಸಿಕ್ಕಿದರೆ ಫಾರೆಸ್ಟರ್ ಇರುವುದಿಲ್ಲ: ಫಾರೆಸ್ಟರ್ ಇದ್ದರೆ ಲಾರಿ ಸಿಕ್ಕುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರೈತನು ದಿನಗಟ್ಟಲೆಯಲ್ಲ ತಿಂಗಳುಗಟ್ಟಲೆ ಅಧಿಕಾರಿಗಳ ಹಿಂದೆ ಅಲೆಯಬೇಕಾಗಿದೆ. ೭೫ ಸಿಎಫ್‌ಟಿ ಯಷ್ಟು ಮರವನ್ನು ರೈತರು ಸಾಗಿಸುವುದಕ್ಕೆ ಸರ್ಕಾರದ ಅನುಮತಿ ಬೇಕಾಗಿಲ್ಲವೆಂದು ಮಾನ್ಯ ಸಚಿವರು ತಿಳಿಸಿದರು. ೭೫ ಸಿಎಫ್‌ಟಿ ಮರದಲ್ಲಿ ಅವನು ಚಿಕ್ಕ ಮನೆಯನ್ನು ಕಟ್ಟುವುದು ಹೇಗೆ? ಕೊಟ್ಟಿಗೆಯನ್ನು ಕಟ್ಟುವುದು ಹೇಗೆ? ಮಲೆನಾಡು ಪ್ರದೇಶಗಳಲ್ಲಿ, ಸಾಮಾನ್ಯವಾಗಿ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ರೈತರು ತಮ್ಮ ತಮ್ಮ ಕೊಟ್ಟಿಗೆಯಲ್ಲಿ ಸೌದೆಯನ್ನು ಸಂಗ್ರಹಿಸಿಡುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಮರ ಕಡಿಯಲು ಸರ್ಕಾರದ ಅಪ್ಪಣೆಗಾಗಿ ರೈತರು ಗಂಟೆಯೆಲ್ಲ ದಿನಗಟ್ಟಲೆ ಕಾಯ್ದರೂ ಅಪ್ಪಣೆ ಸಿಗುತ್ತಿಲ್ಲ. Unless we protect the high range forests of the Western Ghats, Cauvery will become barren and the ecological balance will suffer. ಆದುದರಿಂದ, ಚಿಕ್ಕಪುಟ್ಟ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ೩೫೦ ಸಿಎಫ್‌ಟಿ ಮರ ಮತ್ತು ೧೨ ಟನ್ ಸೌದೆಯನ್ನು ಒಬ್ಬ ರೈತನಿಗೆ ಒಂದು ವರ್ಷಕ್ಕೆ ಅದೂ ಅವನ ಸ್ವಂತ ಹೊಲದಲ್ಲಿರುವ ಮರಗಳನ್ನು ಕಡಿದು—ಕಡಿಯಲಿಕ್ಕೆ ಸರ್ಕಾರ ಅನುಮತಿ ಕೊಡುವುದಾದರೆ, ಈಗಿರುವ ರೈತರ ಹಾಹಾಕರ ಮುಂದೆ ಖಂಡಿತವಾಗಿ ಇರುವುದಿಲ್ಲ. ಆದುದರಿಂದ, ಮಾನ್ಯ ಸಚಿವರು ಒಂದು ತಿದ್ದುಪಡಿ ತಂದು ರೈತಾಪಿ ವರ್ಗಕ್ಕಾಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮೊಹಿದ್ದೀನ್ ಅವರು ಹೇಳಿದಂತೆ: The departmental officials are under the impression that they are the only protectors of forests. With due respect to him, probably they are the first persons who want to destroy the forests because I know of instance where forests have been completely denuded on account of the colussive attitude of the Department. It is not on account of the ryots but it is on account of the officials. With these words, I conclude my speech.

† ಶ್ರೀ ಎ. ಜಿ. ಕೊಡಗಿ.—(ಬೈಂದೂರು) ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರಣ್ಯ ಸಚಿವರು ತಂದಿರುವ ತಿದ್ದುಪಡಿ ಮಸೂದೆ ಮೇಲೆ ಕೆಲವು ಸೂಚನೆಗಳನ್ನು ಕೊಡಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಇವತ್ತು ಕೇವಲ ಟೀ ಎಸ್ಟೇಟ್ ಒಡೆಯರಿಗಾಗಿ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ನಮ್ಮ ಮಾನ್ಯ ಸ್ನೇಹಿತರು ಹೇಳಿದ ಹಾಗೆ, ಒಬ್ಬ ರೈತ ತನ್ನ ಸಣ್ಣ ಜಮೀನಿನಲ್ಲಿರುವ ಮರವನ್ನು ತನ್ನ ಉಪಯೋಗಕ್ಕಾಗಿ ಕಡಿಯಬೇಕಾಗಿದ್ದರೆ, ಸರ್ಕಾರಕ್ಕೆ ಅರ್ಜಿ ಗುಜರಾಯಿಸಿ, ಆ ಮರವನ್ನು ಕಡಿಯಲಿಕ್ಕೆ ಅಪ್ಪಣೆ ಪಡೆಯಬೇಕಾದ ಕಷ್ಟ ಪರಿಸ್ಥಿತಿಯನ್ನನುಭವಿಸುತ್ತಿದ್ದಾನೆ, ಭೂಸುಧಾರಣೆ ಜಾರಿಯಲ್ಲಿರುವಾಗ, ಜಮೀನಿನ ಮೇಲಿರುವ ಮರಗಳನ್ನು ಕಡಿಯುವುದರಲ್ಲಿ ಕೆಲವು ಸಮಸ್ಯೆಗಳು ಉದ್ಭವಿಸಿವೆ. ಗೇಣಿದಾರ ಅಥವಾ ಭೂ ಮಾಲಿಕನು ತನ್ನ ಜಮೀನಿನಲ್ಲಿರುವ ಮರವನ್ನು ಕಡಿಯಲು ಸರ್ಕಾರಕ್ಕೆ ಅನುಮತಿ ಬೇಡಿ ಅರ್ಜಿ ಕೊಟ್ಟರೆ, ಗೇಣಿದಾರ ಮತ್ತು ಭೂಮಾಲೀಕನ ನಡುವೆ ಇರುವ ಭೂ ವಿವಾದವನ್ನೂ ಇತ್ಯರ್ಥವಾಗಿಲ್ಲವೆನ್ನುವ ಒಂದು ಕಾರಣದಿಂದ ಜಮೀನಿನಲ್ಲಿರುವ ಮರವನ್ನು ಕಡಿಯುವುದಕ್ಕೆ ಸರ್ಕಾರದ ಅಧಿಕಾರಿಗಳು ಒಪ್ಪಿಗೆ ಕೊಡುತ್ತಾ ಇಲ್ಲ. ಇದನ್ನು ಮಾನ್ಯ ಅರಣ್ಯ ಸಚಿವರು ದಯವಿಟ್ಟು ಗಮನಿಸಬೇಕೆಂದು ಹೇಳುತ್ತೇನೆ. ಈಗ ಕೇವಲ ಒಂದೂವರೆ ಟನ್‌ನಷ್ಟು ಕಟ್ಟಿಗೆಯನ್ನು ತನ್ನ ಜಮೀನಿನಲ್ಲಿರುವ ಮರಗಳಿಂದ ಸರ್ಕಾರದ ಅನುಮತಿ ಇಲ್ಲದೆ ಕಡಿದು ಸಾಗಿಸಲಿಕ್ಕೆ ರೈತನಿಗೆ ಅವಕಾಶವಿದೆ. ಮಲೆನಾಡು ಪ್ರದೇಶಗಳಲ್ಲಿರುವ ಜನರ ವಿಚಾರವಾಗಿ ಮಾನ್ಯ ನಾಣಯ್ಯನವರು ಸವಿಸ್ತಾರವಾಗಿ ಹೇಳಿದ್ದಾರೆ; ನಾನೂ ಕೂಡ ಮಲೆನಾಡ ಪ್ರದೇಶದಿಂದ ಬಂದವನು. ಮಲೆನಾಡು ಪ್ರದೇಶಗಳಲ್ಲಿ ನಾಲ್ಕೈದು ತಿಂಗಳು ಒಂದೇ ಸಮನೆ ಮಳೆ ಬೀಳುವುದರಿಂದ, ಇಡೀ ವರ್ಷಕ್ಕೆ ಬೇಕಾಗುವಷ್ಟು ಕಟ್ಟಿಗೆಯನ್ನು ಒಂದೇ ಸಲ ಅಲ್ಲಿನ ಜನಗಳು ಜಮಾಯಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಒಂದು ಸಣ್ಣ ಮನೆಗೆ, ಒಂದು ವರ್ಷಕ್ಕೆ ೧೫–೨೦ ಟನ್ ಸೌದೆ ಬೇಕಾಗುತ್ತದೆ ಎನ್ನುವುದನ್ನು ವ್ಯವಹಾರಜ್ಞಾನವುಳ್ಳವರೆಲ್ಲರೂ ಒಪ್ಪಿಕೊಳ್ಳುವ ವಿಚಾರ. ಆದರೆ, ಒಂದೂವರೆ ಟನ್ ಸೌದೆಗೆ ಮಾತ್ರ ಸರ್ಕಾರದ ಅನುಮತಿ ಪಡೆಯದೆ ಸಾಗಿಸಲು ರೈತನಿಗೆ ಅವಕಾಶವಿದ್ದರೆ, ಇನ್ನು ಮಿಕ್ಕ ಸೌದೆ ಪಡೆಯಲಿಕ್ಕೆ ಆತನು ಸರ್ಕಾರಿ ಅಧಿಕಾರಿಗಳ ಹಿಂದೆ ತಿರುಗಾಡಬೇಕಾದ ಸನ್ನಿವೇಶ ಬಂದಿದೆ. ಅಷ್ಟು ಮಾತ್ರವಲ್ಲ, ತಲೆಯಮೇಲೆ ಸೌದೆಯನ್ನು ಕೊಂಡೊಯ್ಯುವಾಗಲೂ ಸರ್ಕಾರಿ ಅಧಿಕಾರಿಗಳಿಂದ ನಾನಾರೀತಿಯ ಕಿರುಕುಳವನ್ನು ರೈತರು ಪಡೆಯುವ ಸನ್ನಿವೇಶ ಬಂದಿದೆ. ಇಂತಹ ಸಂದರ್ಭಗಳೇನಾದರೂ ಬಂದರೆ, ನನ್ನ ಗಮನಕ್ಕೆ ತನ್ನಿ ಎಂದು ಮಾನ್ಯ ಸಚಿವರು ತಿಳಿಸಿದರು. ಅಧಿಕಾರಿಗಳು ಕೊಡುವ ಇಂತಹ ಸಣ್ಣ ಪುಟ್ಟ ಕಿರುಕುಳವನ್ನು ರೈತರು ಸಚಿವರ ಗಮನಕ್ಕೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದುವೇಳೆ ತಂದರೂ, ಯಾವಪರಿಣಾಮವೂ ಆಗುವುದಿಲ್ಲವೆನ್ನುವುದು ರೈತರಾದ ಮಾನ್ಯ ಸಚಿವರಿಗೂ ತಿಳಿದಿರಬೇಕು. ಇಂದು ನಾವು ಕಾಡನ್ನು ಉಳಿಸಬೇಕು; ಬೆಳೆಸಬೇಕು. ಈ ಕಾಡನ್ನು ಹೇಗೆ ಉಳಿಸಬೇಕು ಮತ್ತು ಬೆಳಸಬೇಕೆಂಬುದರ ವಿಚಾರವಾಗಿ ಯೋಗ್ಯ ಸಲಹೆಗಳನ್ನು ಪಡೆದು, ಸೂಕ್ತಕಾನೂನನ್ನು ತರಬೇಕಾಗುತ್ತದೆಂದು ನಾನು ಭಾವಿಸುತ್ತೇನೆ. ಕೇವಲ ಸಣ್ಣ ಪುಟ್ಟ ತಿದ್ದುಪಡಿಯನ್ನು ತರುವುದರಿಂದ, ರೈತರಿಗಿನ್ನೂ ಹೆಚ್ಚಿನ ತೊಂದರೆಯಾಗುತ್ತದೆಯೇ ವಿನಃ ಕಾಡನ್ನು ಉಳಿಸುವುದಕ್ಕಾಗುವುದಿಲ್ಲ; ಬೆಳೆಸುವುದಕ್ಕಾಗುವುದಿಲ್ಲ. ಯಾವ ಸಣ್ಣ ರೈತನೂ ನಮ್ಮ ದೇಶದ ಕಾಡನ್ನು ನಾಶ ಮಾಡಲಿಕ್ಕೆ ಹೊಣೆಗಾರನಲ್ಲವೆಂದು ನಾವು ಖಡಾ ಖಂಡಿತವಾಗಿ ಹೇಳಬಹುದು. ಇದನ್ನು ಎಲ್ಲರೂ ಒಪ್ಪಿಕೊಳ್ಳುವರು. ಕಾಡೇನಾದರೂ ನಾಶವಾಗಿದ್ದರೆ ಅದು ದೊಡ್ಡ ದೊಡ್ಡ ಮರದ ವ್ಯಾಪಾರಿಗಳಿಂದ ಮತ್ತು ಕೆಲವು ಸರ್ಕಾರಿ ಅಧಿಕಾರಿಗಳಿಂದ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಹೀಗಿರುವಾಗ, ರೈತರಿಗೆ ಕಿರುಕುಳ ಕೊಡುವಂಥ ಸಣ್ಣಪುಟ್ಟ ತಿದ್ದುಪಡಿಗಳನ್ನು ತರದೆ ಸಮಗ್ರವಾಗಿ ಕಾಡನ್ನು ಉಳಿಸಲಿಕ್ಕೆ ಮತ್ತು ಬೆಳಸಲಿಕ್ಕೆ ಹೆಚ್ಚು ಪೂರಕವಾದ ಯೋಜನೆಗಳನ್ನು ನಾವು ರೂಪಿಸಿಕೊಳ್ಳಬೇಕಾಗುತ್ತದೆ. ಇದರಲ್ಲಿ ಜನರೂ ಸಹ ಯಾವರೀತಿ ಪಾತ್ರ ವಹಿಸಿಕೊಳ್ಳಬೇಕೆಂಬುದನ್ನು ನಾವು ನೋಡಬೇಕಾಗುತ್ತದೆ. ತನ್ನ ಸ್ವಂತ ಜಮೀನಿನಲ್ಲಿರುವ ಮರವನ್ನು ಕಡಿಯಲಿಕ್ಕೆ ಸರ್ಕಾರದ ಅಧಿಕಾರಿಗಳಿಂದ ಕಿರುಕುಳದಿಂದ ಕೂಡಿದ ಅನುಮತಿ ಪಡೆಯುವುದರ ಬದಲು ಸ್ವಂತ ಜಮೀನಿನಲ್ಲಿ ಮರಗಳನ್ನು ನೆಡುವ ಹವ್ಯಾಸವೇ ಬೇಡ ಎನ್ನುವ ಸಂದರ್ಭ ಬಂದೀತು. ಆದುದರಿಂದ, ಜಮೀನುಗಳಲ್ಲಿ ರೈತರು ಹೆಚು ಹೆಚ್ಚು ಮರಗಳನ್ನು ಬೆಳೆಯಲಿಕ್ಕೆ ಇಲಾಖೆ ಪ್ರೋತ್ಸಾಹ ಕೊಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಮರದ ಕಟ್ಟಿಗೆಗಳನ್ನು ಅವಲಂಬಿಸಿರುವ ಸಣ್ಣ ಪುಟ್ಟ ಕೈಗಾರಿಕೆಗಳಿವೆ. ಇವುಗಳಿಗೂ ಕೂಡ ಯಾವ ರೀತಿ ಕಟ್ಟಿಗೆಗಳನ್ನು ಒದಗಿಸಬೇಕೆನ್ನುವುದರ ಕುರಿತು ಚಿಂತನೆ ಮಾಡಿ ಸಮಗ್ರವಾದ ಕಾಯದೆಯನ್ನು ತರಬೇಕೆಂದು ಹೇಳಬಯಸುತ್ತೇನೆ. ಈ ಕುರಿತು ಮಾನ್ಯ ಸಚಿವರೊಡನೆ ನಾವು ಚರ್ಚೆಗೆ ಸದಾ ಸಿದ್ಧರಿದ್ದೇವೆ. ಕಾಡನ್ನು ಬೆಳೆಸಿ ಉಳಿಸುವ ಕಾರ್ಯದಲ್ಲಿ ಸಾಮಾನ್ಯ ಜನರನ್ನೂ ಇನ್‌ವಾಲ್ವ್ ಮಾಡಬೇಕು; ಕಾಡನ್ನು ಬೆಳೆಸಲು ಸಾರ್ವಜನಿಕರಿಗೆ ಮನಸ್ಸಿದೆ ಎಂಬುದನ್ನು ಸರ್ಕಾರ ತಿಳಿಯಬೇಕು.

ಸಾಮಾನ್ಯವಾಗಿ ಸರ್ಕಾರದವರು, ಅಧಿಕಾರಿಗಳ ಮಾತನ್ನು ನಂಬಿ ಸಾಮಾನ್ಯ ಜನರನ್ನೇಕೆ ಶಾಸಕರನ್ನೇ ನಂಬಿಕೆಗೆ ತೆಗೆದುಕೊಂಡಿಲ್ಲ. ಅದರ ಬದಲು, ರೈತರನ್ನು ಮತ್ತು ಶಾಸಕರನ್ನು ಸರ್ಕಾರ ನಂಬಿಕೆಗೆ ತೆಗೆದುಕೊಂಡರೆ, ಕಾಡನ್ನು ಉಳಿಸಿ ಬೆಳಸಲಿಕ್ಕೆ ಉತ್ತಮ ಯೋಜನೆಗಳನ್ನು ರೂಪಿಸುವಲ್ಲಿ ಸರ್ಕಾರಕ್ಕೆ ಸಲಹೆ ಮಾಡಲು ನಾವೂ ಸಮರ್ಥರು ಎಂದು ಹೇಳಿ, ಸಣ್ಣ ಪುಟ್ಟ ರೈತರಿಗಾಗುವ ಕಿರುಕುಳವನ್ನು ತಪ್ಪಿಸಿ, ಕಾಡನ್ನು ಹೆಚ್ಚು ಹೆಚ್ಚು ಬೆಳೆಸಿ ಉಳಿಸಲು ಸಮಗ್ರವಾದೊಂದು ತಿದ್ದುಪಡಿಯನ್ನು ತರಬೇಕೆಂದು ಸೂಚಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪ (ತರೀಕೆರೆ).—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಟೀ ಮತ್ತು ಕಾಫಿ ಪ್ಲಾಂಟೇಷನ್‌ನವರ ಮನವಿಗಳಿಗೆ ಹೆಚ್ಚಿಗೆ ಪ್ರಾಶಸ್ತ್ಯ ಕೊಟ್ಟಿರುವಂತೆ ಕಾಣುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು ಒಂದು ಲಕ್ಷ, ಎರಡು ಲಕ್ಷ, ಮೂರು ಲಕ್ಷ ಎಕರೆ ಟೀ ಮತ್ತು ಕಾಫಿ ಪ್ಲಾಂಟೇಷನ್ ಇರಬಹುದು ಮಾನ್ಯ ಮಂತ್ರಿಗಳು ಮೂರುವರೆ ಕೋಟಿ ಜನರ ವಿಷಯವನ್ನು ಗಮನಿಸಿದಂತೆ ಕಾಣುವುದಿಲ್ಲ. ನಮ್ಮ ರಾಜ್ಯದ ಜನಸಂಖ್ಯೆ ಮೂರುವರೆ ಕೋಟಿ ಇದೆ, ೫೦ ಲಕ್ಷ ಜನ ಇವತ್ತು ಬೇರೆ ಇಂಧನ ಉಪಯೋಗ ಮಾಡುತ್ತಾರೆ. ಇನ್ನುಳಿದ ಮೂರು ಕೋಟಿ ಜನ ಸೌದೆ ಉಪಯೋಗ ಮಾಡುತ್ತಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಹತ್ತುಸಾವಿರ ಜನಕ್ಕೆ ಒಂದು ಡಿಪೋ ತೆಗೆಯಬೇಕಾಗುತ್ತದೆ, ಆದರಂತೆ ನಮ್ಮ ರಾಜ್ಯದಲ್ಲಿ ಮೂರುಸಾವಿರ ಡಿಪೋಗಳನ್ನು ತೆರೆಯಬೇಕಾಗುತ್ತದೆ. ಈ ಒಂದು ಲೆಕ್ಕದ ಪ್ರಕಾರ ಒಂದು ವರ್ಷಕ್ಕೆ ೬೦ ಲಕ್ಷ ಟನ್ ಸೌದೆ ಬೇಕಾಗುತ್ತದೆ, ಶ್ರೀ ಮಾನ್ ರಾಮೇಗೌಡರು ಇದನ್ನು ಒದಗಿಸುವುದಕ್ಕೆ ಸಾಧ್ಯವೇ ? ಇವತ್ತು ಅರಣ್ಯ ಮತ್ರಿಗಳು ಅರಣ್ಯ ಉಳಿಸಬಹುದು, ಆದರೆ ಮನುಷ್ಯರು ಸತ್ತುಹೋಗುತ್ತಾರೆ. ಇವೊತ್ತಿನದಿವಸ ಅರಣ್ಯಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ಮೀರಿ, ಕಳ್ಳತನದಿಂದ ಸೌದೆ ತಂದು ಜೀವನ ಮಾಡುತ್ತಿರುವುದರಿಂದ ಜನ ಇನ್ನೂ ಬದುಕಿದ್ದಾರೆ. ಇಲ್ಲಿ ಬಡವರ ಮತ್ತು ಶ್ರೀಮಂತರ ಪ್ರಶ್ನೆ ಅಲ್ಲ, ಎಲ್ಲರೂ ಅಡಿಗೆ ಮಾಡಬೇಕಾಗುತ್ತದೆ ಇವತ್ತು ನಾವುಗಳು ಊರಿಗೆ ಹೋದರೆ, ನಮಗೆ ಅಡಿಗೆ ಮಾಡುವುದಕ್ಕೆ ಸೌದೆ ಇಲ್ಲ, ಎಂದು ಜನ ನಮ್ಮನ್ನು ಕೇಳುತ್ತಾರೆ. ಸೌದೆಯ ಸರಬರಾಜು ಸರಿಯಾದ ರೀತಿಯಲ್ಲಿ ಬಾರದಹೊರತು, ಇಂಥ ಒಂದು ತಿದ್ದುಪಡಿ ತರುವುದು ಸೂಕ್ತವಲ್ಲವೆಂದು ಹೇಳುತ್ತೇನೆ. ಇವತ್ತು ರೈತಾಪಿ ವರ್ಗದ ಜನ ಇಂಥ ಒಂದು ಕಾನೂನಿನಿಂದ ಬಹಳ ತೊಂದರೆಗೆ ಗುರಿಯಾಗುತ್ತಾರೆ. ಇವೊತ್ತಿನದಿವಸ ಸ್ವಂತ ಜಮೀನಿನಲ್ಲಿರತಕ್ಕ ಮರಗಳನ್ನು ಕಡಿಯುವುದಕ್ಕೆ ಪಡೆಯುತಕ್ಕ ಪರ್ಮಿಷನ್ ತೆಗೆದು ಹಾಕಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಸಣ್ಣಪುಟ್ಟ ತಿದ್ದುಪಡಿಗಳನ್ನು ತಂದು ರೈತಾಪಿ ವರ್ಗದವರಿಗೆ ಮತ್ತು ಬಡವರಿಗೆ ತೊಂದರೆ ಕೊಡುವ ಬದಲು ಸಮಗ್ರವಾದ ಒಂದು ತಿದ್ದುಪಡಿಯನ್ನು ಅರಣ್ಯ ಉಳಿಸುವ ಬಗ್ಗೆ ಮಾನ್ಯ ಮಂತ್ರಿಗಳು ತರಲಿ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಎನ್. ರೆಡ್ಡಿ (ಮಾಲೂರು).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಕಾಡು ಮಂತ್ರಿಗಳು ತಂದಿರತಕ್ಕ ತಿದ್ದುಪಡಿ, ಒಳ್ಳೆಯ ಉದ್ದೇಶದಿಂದಲೇ ತಂದಿದ್ದಾರೆ. ಜೊತೆಗೆ ಅವರು ಆಹಾರ ಮಂತ್ರಿಯೂ ಕೂಡ ಆಗಿದ್ದಾರೆ. ಅವರು ಆಹಾರದ ದೃಷ್ಟಿಯನ್ನು ಕೂಡ ಸ್ವಲ್ಪ ನೋಡಿಕೊಂಡು ಈ ತಿದ್ದುಪಡಿಯನ್ನು ತರಬೇಕಾಗಿತ್ತು ಎಂದು ಹೇಳುತ್ತೇನೆ. ಇತ್ತೀಚೆಗೆ ಮಾನ್ಯ ಮಂತ್ರಿಗಳು ಬೆಂಗಳೂರಿನಲ್ಲಿಯೇ ಜಾಸ್ತಿ ವಾಸ ಮಾಡುವಹಾಗೆ ಕಾಣುತ್ತೆ. ಇಲ್ಲಿ ಹೆಚ್ಚಿಗೆ ಆಲ್ ಎಲೆಕ್ಟ್ರಿಕ್ ಹೋಂಗಳು ಜಾಸ್ತಿ, ಗ್ಯಾಸ್ ಮತ್ತು ಸ್ಟವ್‌ಗಳ ಮೂಲಕ ಜಾಸ್ತಿ ಅಡಿಗೆ ಮಾಡುತ್ತಾರೆ. ಸೌದೆ ಅನುಕೂಲ ಅಷ್ಟಾಗಿ ಇಲ್ಲಿ ಇಲ್ಲ, ಆದರೆ, ಹಳ್ಳಿಗಳಲ್ಲಿ ಇದೆಲ್ಲಾ ಎಲ್ಲಿ ಬರುತ್ತದೆ, ಹಳ್ಳಿಗಳಲ್ಲಿ ಸೌದೆ ಉಪಯೋಗ ಬಿಟ್ಟರೆ ಬೇರೆ ಯಾವುದೂ ಇಲ್ಲ. ಇವತ್ತು ಮರ ಕಡಿಯಬೇಕಾದರೆ ಕಾನೂನು ಇದೆ, ಕಾನೂನಿನ ಪ್ರಕಾರ, ಜಮೀನಿನ ಸರ್ವೆ ನಂಬರು, ಪಹಣಿ, ಇದ್ದು ಸ್ಟಾಂಪ್‌ಹಾಕಿದ ಅರ್ಜಿಯನ್ನು ವಿಲೇಜ್ ಅಕೌಂಟೆಂಟ್‌ಗೆ ಕೊಟ್ಟು, ಅಲ್ಲಿಂದ ಅದು ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಹೋಗಿ ನಂತರ ಅದು ಅಮುಲ್ದಾರ್‌ನಿಗೆ ಬರುತ್ತದೆ. ಅಲ್ಲಿಗೆ ೫೦ ರೂಪಾಯಿ ಬೆಲೆ ಬಾಳುವ ಮರಕ್ಕೆ ೨೦೦ ರೂಪಾಯಿ ರೈತನಿಗೆ ಖರ್ಚು ಆಗಿರುತ್ತದೆ. ರೈತರು ತೂಕ ಮತ್ತಿತರ ಲೆಕ್ಕಗಳನ್ನು ಇಡುವುದಕ್ಕೆ ಆಗುತ್ತದೆಯೇ ? ಸಾಮಾನ್ಯವಾಗಿ ಹಳ್ಳಿಪ್ರದೇಶಗಳಲ್ಲಿ ಹಸಿರಿನಿಂದ ಕೂಡಿದ ಮರಗಳನ್ನು ಯಾರು ಕಡಿಯುವುದಿಲ್ಲ, ಅವುಗಳನ್ನು ದೇವರಂತೆ ಪೂಜೆ ಮಾಡುತ್ತಾರೆ, ಒಣಗಿದ ಮರಗಳನ್ನು ಕಡಿಯುತ್ತಾರೆ. ಒಣಗಿದ ಮರಗಳನ್ನು ಕಡಿಯುವುದಕ್ಕೂ ಪರ್ಮಿಷನ್ ಕೊಡದೇ ಹೋದರೆ ಹೇಗೆ ? ಇಂಥ ಒಂದು ಕಾನೂನಿನಿಂದ ಒಳಜಗಳ

ಕೂಡ ನಡೆಯುವುದಕ್ಕೆ ಅವಕಾಶ ಇದೆ. ಮಾನ್ಯ ಮಂತ್ರಿಗಳು ಬಡವರಿಗೆ ಅನುಕೂಲ ವಾಗತಕ್ಕಂಥ ತಿದ್ದುಪಡಿಯನ್ನು ತರಲಿ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರಿ ಎಂ. ವೀರಪ್ಪಮೊಯ್ಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಈ ದೇಶದ ರೈತರ ವಿಚಾರ ಬಂದಾಗ, ನಾವುಗಳು ಸರಿಯಾದ ರೀತಿಯಲ್ಲಿ, ವಾಸ್ತವಿಕ ರೀತಿಯಲ್ಲಿ ಅವರ ಒಂದು ಜೀವನದ ಕ್ರಮಗಳ ಬಗ್ಗೆ ಈ ಸಭೆಯಲ್ಲಿ ಮಾತನಾಡಲೇ ಬೇಕಾಗುತ್ತದೆ. ೧೯೭೬ರಲ್ಲಿ ಅರಣ್ಯ ಸಂರಕ್ಷಣಾ ಕಾನೂನು ಜಾರಿಗೆ ಬಂತು. ಈ ಒಂದು ಕಾಯಿದೆಯನ್ನು ಸದುದ್ದೇಶದಿಂದಲೇ ಜಾರಿಗೆ ತರಲಾಯಿತು. ಅದು ಒಂದು ಅನುಶಾಸನ ಕಾಲ; ದೇಶದಲ್ಲಿರತಕ್ಕ, ಸಮಾಜದಲ್ಲಿರತಕ್ಕ ಮೂಲ ಭೂತ ಆಸ್ತಿಗಳನ್ನು, ದೇಶ ದಲ್ಲಿರತಕ್ಕ ಜನಜೀವನವನ್ನು ಸರಿಯಾದ ದಿಕ್ಕಿನಲ್ಲಿ ನಡೆಸಿದಂತ ಕಾಲ. ಅಂತಹ ಒಂದು ಸಮಯದಲ್ಲಿ ಕರ್ನಾಟಕದಲ್ಲಿ ಅರಣ್ಯ ಸಂರಕ್ಷಣಾ ಕಾನೂನನ್ನು ಅರಣ್ಯ ಉಳಿಸಿಕೊಳ್ಳುವ ದೃಷ್ಟಿಯಿಂದ ಜಾರಿಗೆ ತರಲಾಯಿತು.

ಈ ಶಾಸನ ಸಭೆ ಒಂದು ಶಿಸ್ತಿನ ಕಾಯಿದೆಯನ್ನು ತಂದಾಗ ಕೆಲವು ಸಂದರ್ಭದಲ್ಲಿ ಆ ಕಾಯಿದೆ ಅನುಷ್ಠಾನ ಮಾಡಲಿಕ್ಕೆ ಅಧಿಕಾರಿಗಳ ಕಡೆಗೆ ಹೋದಾಗ ಕೆಲವು ಸಂದರ್ಭದಲ್ಲಿ ಶಿಸ್ತಿನ ರೀತಿಯಲ್ಲೂ ಮತ್ತೆ ಕೆಲವು ಸಂದರ್ಭದಲ್ಲಿ ಕಠಿಣ ರೀತಿಯಲ್ಲೂ ಆಗಬಹುದು. ಅದು ಅನುಷ್ಠಾನವಾಗುವಂತಹ ಸಂದರ್ಭದಲ್ಲಿ ಕಂಡುಬರುತ್ತದೆ. ಈ ಟ್ರೀ ಪ್ರಿಜರ್ವೇಷನ್ ಆ್ಯಕ್ಟ್ ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ಇವರು ತಂದಿದ್ದೇವೆಂದು ಹೇಳಿದರೂ ಕೂಡ ಕೆಲವು ಸಂದರ್ಭಗಳಲ್ಲಿ ಜನರಿಗೆ ಮಾರಕವಾಗಿದೆ. ಈ ವಿಷಯವನ್ನು ಮಲೆನಾಡಿನಿಂದ ಬರತಕ್ಕಂತಹ ಶಾಸಕರು ವಾಸ್ತವಿಕತೆಯಿಂದ ಹೇಳಲೇಬೇಕಾಗುತ್ತದೆ. ಈಗ ನಮ್ಮ ಮಿತ್ರರು ಈ ಸಭೆಯಲ್ಲಿ ಇಲ್ಲ. ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಕುಟುಂಬ ಕಲ್ಯಾಣ ಯೋಜನೆ ಗಳನ್ನು ಮಾಡುವಾಗ ಬಹಳ ತೊಂದರೆಯಾಗುತ್ತಿದ್ದುದನ್ನು ಅವರು ಹೆಚ್ಚಾಗಿ ಹೇಳುತ್ತಿದ್ದರು. ಈ ಟ್ರೀ ಪ್ರಿಜರ್ವೇಷನ್ ಆ್ಯಕ್ಟ್ ಪಾಸ್ ಆದನಂತರ ಅನುಷ್ಠಾನಕ್ಕೆ ಬಂದಮೇಲೆ ಉತ್ತರ ಭಾರತದಲ್ಲಿ ಕುಟುಂಬ ಕಲ್ಯಾಣ ವಿಚಾರದ ಬಗ್ಗೆ ಏನು ಹೇಳುತ್ತಿದ್ದರು ಅದೇರೀತಿ ನಮ್ಮಲ್ಲಿಯೂ ಕೂಡ ಹೇಳು ವಂತಹ ಸಂದರ್ಭ ಬರುತ್ತದೆ. ಇದರ ಅನುಷ್ಠಾನದಿಂದ ರೈತರಿಗೆ ಇದರಿಂದ ತೊಂದರೆಯಾಗುತ್ತದೋ ಅಥವಾ ಅನುಕೂಲವಾಗುತ್ತದೊ ಅದನ್ನು ಸರ್ಕಾರ ನೋಡಿ ಮಾಡಬೇಕೆಂದು ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇವೊತ್ತು ನಾವು ಹಳ್ಳಿಗಳ ಕಡೆಯಿಂದ ಬರತಕ್ಕಂತಹ ಶಾಸಕರು ಹೇಳಬೇಕಾದರೆ ದಂಗುಬಡಿಯುವ ಹಾಗೆ ಹೆಚ್ಚು ರೈತರಿಗೆ ಆಗಿದೆ. ಅವರ ದಿನನಿತ್ಯದ ಕೃಷಿ ಮತ್ತು ಅವರ ಡೊಮೆಸ್ಟಿಕ್ ಅವಶ್ಯಕತೆಗಳಿಗೆ ತುಂಬಾ ತೊಂದರೆಯುಂಟಾಗಿದೆ ಎಂದು ಹೇಳಬಹುದು. ಈ ದೇಶದ ಅರಣ್ಯಸಂಪತ್ತನ್ನು ಉಳಿಸಿಕೊಳ್ಳಬೇಕೆಂಬುದು ಇದರ ಪೂರಕವಾಗಿಲ್ಲ. ಜನರಿಗೆ ಇದರಿಂದ ಹೆಚ್ಚು ಸಂಕಷ್ಟವಾಗಿದೆ. ಆದ್ದರಿಂದ ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ, ಈ ಮೂಲಭೂತ ವಾದಂತಹ ಆ್ಯಕ್ಟಿನ ವಿಚಾರದಲ್ಲಿ ಟ್ರೀ ಪ್ರಿಜರ್ವೇಷನ್ ಆ್ಯಕ್ಟ್ ಅಗತ್ಯವೋ, ಅನಗತ್ಯವೋ ಎನ್ನುವುದನ್ನು ನೋಡಬೇಕಾಗಿದೆ. ಇದನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಇದನ್ನು ರೈತರ ಹಿತದೃಷ್ಟಿಯಿಂದ ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮಾನ್ಯ ಮಂತ್ರಿಗಳು ಏನು ಅಮೆಂಡ್‌ಮೆಂಟ್ ಬಿಲ್ ತಂದಿದ್ದೀರಿ ಇದರ ಬಗ್ಗೆ ವಿಚಾರವನ್ನು ಪರಿಶೀಲನೆ ಮಾಡಿದಾಗ ಈ ಅಮೆಂಡ್‌ಮೆಂಟ್ ಮತ್ತು ೧೯೭೬ರ ಕಾಯಿದೆ ಅನಗತ್ಯವೂ ಎಂಬ ಆಲೋಚನೆಗೆ ಬಂದಾಗ ಇವೆರಡನ್ನೂ ಕೈಬಿಡುವ ಸಂದರ್ಭ ಬರಬಹುದು. ರೈತರಿಗೆ ಈ ಕಾಯಿದೆಯಿಂದ ತೊಂದರೆಯಾಗದಿದ್ದರೂ ಇದರ ಅನುಷ್ಠಾನದಿಂದ ಆಗಿದೆ. ಇವೊತ್ತು ಟೀ ಎಸ್ಟೇಟ್ ಓನರ್ಸ್‌ಗಳಿಗೆ ಒಂದು ರೀತಿಯಿಂದ ರಿಯಾಯ್ತಿ ಕೊಡುವುದರಿಂದ ರೈತರನ್ನು ಚಿಂತನೆಗೆ ಈಡುಮಾಡತ್ತೇವೆ. ನಾವು ರೈತರ ಬಗ್ಗೆ ಏನು ಹೋರಾಟ ಮಾಡುತ್ತೇವೆ. ಆ ಹೋರಾಟವನ್ನು ಸ್ವಲ್ಪ ಸಮಯ ಒತ್ತಟ್ಟಿಗೆ ಇಟ್ಟು, ಶಾಸಕ ಯಾರನ್ನು ಪ್ರತಿನಿಧಿ ಸಬೇಕೋ ಅವರನ್ನು ಮರೆತು ಯಾವುದೋ ಒಂದು ವಿಶಿಷ್ಟ ಪಂಗಡಗಳಿಗೆ ನಾವು ಸಪೋರ್ಟ್ ಮಾಡಿ, ನಂತರ ರೈತರ ಚಿಂತನೆಯನ್ನು ನೋಡುತ್ತಿದ್ದೇವೆ. ಆದ್ದರಿಂದ ಈ ವಿಚಾರದಲ್ಲಿ ಹೆಚ್ಚು ಆಲೋಚನೆ ಮಾಡಿ ಮುಂದಿನ ಹೆಜ್ಜೆ ಇಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳುತ್ತೇನೆ. ಇವೊತ್ತು ಕೃಷಿ ಕಾರ್ಮಿಕರು, ಅಗ್ರಿಕಲ್ಚರಲ್, ಇಂಡಸ್ಟ್ರಿಯಲ್, ಕಮರ್ಷಿಯಲ್ ಈ ತರಹ ವಿಂಗಡಿಸಿದಾಗ ಕಮರ್ಷಿಯಲ್ ಮತ್ತು ಇಂಡಸ್ಟ್ರಿಯಲ್ ಯೂಸ್‌ಗೆ ನೀವು ಎಕ್ಸೆಮ್ಪ್ಟ್ ಮಾಡುತ್ತೀರಾ ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ನೂರಾರು ಎಕರೆ ಜಮೀನನ್ನು ನೀವು ವಿನಾಯ್ತಿಗೊಳಿಸಿದಾಗ ನಮ್ಮ ದೇಶದಲ್ಲಿ ಫಾರೆಸ್ಟ್ ಪ್ರಿಸರ್ವೇಷನ್ ಮಾಡಬೇಕೆಂದು ಹೊರಟಾಗ ಆ ಪ್ರದೇಶದ ಭಾಗದಲ್ಲಿ ಸರ್ಕಾರಿ

ಅರಣ್ಯ ಇರಬಹುದು. ಇವೊತ್ತು ಟೀ ಎಸ್ಟೇಟ್ ಓನರ್ಸ್‌ಗಳಿಗೆ ಮಾಡಿದರೆ ಅದೂ ಕೂಡ ಬಹಳ ವ್ಯಾಪಕ ವಾಗಿ ಹೋಗುತ್ತದೆ. ಏರಿಯಾಸ್ ಆ್ಯನ್ಸಿಲರಿ ಅಟಾಚಡ ಇದರ ವ್ಯಾಪ್ತಿ ಕೂಡ ಬಹಳ ಉದ್ದಕ್ಕೆ ಹೋಗ ಬಹುದು. ಇದರಿಂದ ಈ ಸಮಾಜದಲ್ಲಿ ಒಂದು ಶ್ರೀಮಂತ ಪಂಗಡಕ್ಕೆ ಹೆಚ್ಚು ಸಹಕಾರ ಕೊಟ್ಟಂತಾಗು ತ್ತದೆ. ಅವರುಗಳಿಗೆ ಬದುಕಿ ಬಾಳಿ ಎಂದು ಉದ್ದ ಕೈಯಲ್ಲಿ ರಿಯಾಯಿತಿ ಕೊಟ್ಟು ರೈತರಿಗೆ ನೀವು ಸ್ವಲ್ಪ ನಿಧಾನವಾಗಿ ಒಂದು ಸಮಯದಲ್ಲಿ ನಡೆಯಬೇಕು ಎನ್ನುವಂತಾದ್ದನ್ನು ಮಾಡಿದರೆ ಸಮಾಜದ ಒಂದು ಸಮತೋಲನ ತಪ್ಪಿಹೋಗಬಹುದು ಎಂದು ಹೇಳುತ್ತೇನೆ. ಇಂಡಸ್ಟ್ರಿಯಲ್ ಮತ್ತು ಕಮರ್ಷಿಯಲ್ ಪರಪಸ್‌ಗಳಿಗೆ ನೀವು ನೂರಾರು ಎಕರೆಗಳನ್ನು ಮಾಡುತ್ತೀರಾ ಅವರ ಅವಶ್ಯಕತೆಗಳೂ ಕೂಡ ಬಹಳ ದೊಡ್ಡ ಸಂಖ್ಯೆಯಲ್ಲಿಯೇ ಇರುತ್ತದೆ. ಅವರ ಅವಶ್ಯಕತೆ ಹೆಚ್ಚಿನ ಸಂಖ್ಯೆಯಲ್ಲಿ ಇರುವಾಗ ಅವರು ಒಂದು ವರ್ಷದ ಮಟ್ಟಿಗೆ ಆರು ತಿಂಗಳ ಮಟ್ಟಿಗೆ ಪ್ಲಾನ್ ಮಾಡುತ್ತಾರೆ. ಅವರು ಸಂಬಂಧಪಟ್ಟ ಅಧಿ ಕಾರಿಗಳಿಗೆ ಬೇಡಿಕೆ ಕೊಟ್ಟು ಅದಕ್ಕೆ ಬೇಕಾದಂತಹ ಲೈಸೆನ್ಸ್ ತೆಗೆದುಕೊಳ್ಳುತ್ತಾರೆ. ಅವರುಗಳಿಗೆ ಪ್ರತಿ ಯೊಂದು ವಿಚಾರಗಳಲ್ಲಿಯೂ ಚೆನ್ನಾಗಿ ತಿಳಿದುಕೊಂಡಿರುತ್ತಾರೆ ಅವರು ಲೈಸೆನ್ಸ್ ಪಡೆದುಕೊಳ್ಳ ಬೇಕಾದರೆ ಅವರಿಗೆ ವಿಚಾರ ಗೊತ್ತಿರುತ್ತದೆ. ಆದೇ ರೈತರು ಆಯಾ ದಿವಸದ ಅವಶ್ಯಕತೆ ಪೂರೈಸಿ ಕೊಳ್ಳಲಿಕ್ಕೆ ದಿನನಿತ್ಯ ಅಧಿಕಾರಿಗಳಿಂದ ಲೈಸೆನ್ಸ್ ಪಡೆದುಕೊಳ್ಳುವುದು ಸಾಧ್ಯವೇ ? ಈ ಟೀ ಎಸ್ಟೇಟ್ ಓನರ್ಸ್ ಏನಿದ್ದಾರೆ ಅವರಿಗೆ ಸಾಕಷ್ಟು ಅವಕಾಶ ಇರುವಾಗ ಅವರಿಗೆ ಸರಾಗವಾಗಿ ವಿನಾಯ್ತಿ ಕೊಟ್ಟು ಕಾನೂನು ಮಾಡುವ ಅವಶ್ಯಕತೆ ಇದೆಯೇ ಎನ್ನುವ ವಿಚಾರವನ್ನು ಮರುಪರಿಶೀಲನೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇವೊತ್ತು ರಿಯಾಯಿತಿ ಪಡೆದುಕೊಂಡಂತಹವರು ಲೈಸೆನ್ಸ್ ಪಡೆಯದೇ ಇರತಕ್ಕಂತಹ ಮರಗಳನ್ನು ಕಡಿದು ಎಷ್ಟೋ ಅರಣ್ಯವನ್ನು ನಾಶಮಾಡಿದ್ದಾರೆ. ಸರ್ಕಾರದಿಂದ ಟೀ ಎಸ್ಟೇಟ್ ಓನರ್ಸ್‌ಗಳಿಗೆ ವಿನಾಯ್ತಿ ಕೊಡುವುದು ಈಗ ಇರತಕ್ಕಂತಹ ಕಾಡನ್ನು ನಾಶ ಮಾಡುವುದಕ್ಕೆ ಅನುವು ಮಾಡಿಕೊಟ್ಟಂತೆ ಆಗುತ್ತದೆಂದು ಹೇಳುತ್ತೇನೆ. ಇಷ್ಟು ಮಾತ್ರವೇ ಅಲ್ಲ ಫಾರೆಸ್ಟ್ ಕೂಡ ಹೆಚ್ಚಾಗಿ ಇರುವಂತಾದ್ದು ಈ ಪ್ರದೇಶದಲ್ಲಿಯೇ. ಇದರಿಂದ ಏನಾಗುತ್ತದೆಂದರೆ ಒಂದು ಕಡೆ ಪ್ರೈವೇಟ್ ಫಾರೆಸ್ಟ್ ಇನ್ನುಳಿದ ಕಡೆಗಳಲ್ಲಿ ಸರ್ಕಾರಿ ಅರಣ್ಯ ಈ ರೀತಿ ಆದರೆ ಸರ್ಕಾರದವರು ಎಷ್ಟು ಅರಣ್ಯ ಸಂಪತ್ತನ್ನು ಕಾಯ್ದುಕೊಳ್ಳಬೇಕಾಗಿದೆಯೋ ಅದಕ್ಕೆ ಕಷ್ಟವಾಗುತ್ತದೆ. ಈ ರೀತಿ ಉದ್ದನೆಯ ಪಂಗಡಗಳಿಗೆ ವಿನಾಯ್ತಿ ಕೊಟ್ಟಾಗ ಹೆಚ್ಚಿನ ಮಟ್ಟಿಗೆ ಅರಣ್ಯ ಸಂಪತ್ತು ನಾಶವಾಗುತ್ತದೆ. ಅದರ ಫಲ ದಿಂದಾಗಿ ಕೊನೆಗೆ ಸಮಾಜದಲ್ಲಿ ಸಣ್ಣಸಣ್ಣ ಪಂಗಡಗಳು ಏನಿವೆ ಅವುಗಳ ಮೇಲೆ ಹೆಚ್ಚು ತೆರಿಗೆ ಹಾಕ ತಕ್ಕಂತಹ ವಿಚಾರ ಬಂದು ಮಹಾ ದೊಡ್ಡ ಪಾತಕವನ್ನು ಈ ಸಮಾಜದಲ್ಲಿ ಹೊರುವಂತಹ ವಿಚಾರ ವನ್ನು ಕೂಡ ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಆದುದರಿಂದ ಈ ವಿಷಯವನ್ನು ಕೂಲಂಕಷ ವಾಗಿ ವಿಚಾರ ಮಾಡಬೇಕಾಗಿದೆ. ಇದು ಒಂದು ಸಣ್ಣ ಮಸೂದೆಯಾದರೂ ಕೂಡ ಇವೊತ್ತು ಸಮಾಜ ದಲ್ಲಿ ರೈತನ ಅನುಕಂಪದ ದೃಷ್ಟಿಕೋನ ಏನಿದೆ ಆ ದೃಷ್ಟಿಕೋನ ಅಲುಗಾಡಿಸುವುದು ಈ ಕಾಯಿದೆಯಿಂದ ಬರಬಹುದು. ಆದುದರಿಂದ ಇದರ ಬಗ್ಗೆ ಸಂಪೂರ್ಣವಾಗಿ ಮರುಪರಿಶೀಲನೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದರಿಂದ ಬಡವರಿಗೆ, ಕೃಷಿ ಕಾರ್ಮಿಕರಿಗೆ ತೊಂದರೆಯಾಗದ ರೀತಿ ಯಲ್ಲಿ ಇದನ್ನು ಪರಿಶೀಲನೆ ಮಾಡಬೇಕೆಂದು ಮತ್ತೊಮ್ಮೆ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಂಡು, ಅಧ್ಯಕ್ಷರು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

೩–೩೦ ಪಿ. ಎಂ.

† ಶ್ರೀ ಬಿ. ವಿ. ಜನಾಲಿ (ಗುಳೇದ್‌ಗುಡ್ಡ) :—ಸನ್ಮಾನ್ಯ ಸಭಾಧ್ಯಕ್ಷರೆ, ಈಗ ಮಾನ್ಯ ಅರಣ್ಯ ಖಾತೆ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಮಸೂದೆಯನ್ನು ಸ್ವಾಗತಿಸುತ್ತೇನೆ. ಆದರೆ ಅದರಲ್ಲಿರತಕ್ಕ ದೋಷಗಳನ್ನು ಕಟುವಾಗಿ ವಿರೋಧಿಸುತ್ತೇನೆ. ಬಹುಶಃ ಮಾನ್ಯ ಮಂತ್ರಿಯವರ ಕಲ್ಪನೆಯಲ್ಲಿ ಅರಣ್ಯ ಗಳು ರೈತರಿಂದಲೇ ಹಾಳಾಗುತ್ತವೆ ಎಂದಿರಬಹುದು. ಅದು ಸರಿಯಲ್ಲ. ಇವತ್ತು ಅರಣ್ಯ ಸಂಪತ್ತು ಹಾಳಾಗುತ್ತಿದೆ ಎಂದರೆ ಅದು ಕೇವಲ ಕಂಟ್ರಾಕ್ಟರ್ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಂದ ಎಂದು ಹೇಳಬಯಸುತ್ತೇನೆ. ಅರಣ್ಯವನ್ನು ಉಳಿಸಬೇಕು, ಬೆಳೆಸಬೇಕೆಂಬ ಇಚ್ಛೆ, ಅಭಿಲಾಷೆ ಮಾನ್ಯ ಸಚಿವರಿ ಗಿದ್ದರೆ ಕಂಟ್ರಾಕ್ಟರ್‌ಗಳ ಕೈವಾಡವನ್ನು ತಪ್ಪಿಸಿ ಸರ್ಕಾರದ ವತಿಯಿಂದ ಡಿಪೋಗಳನ್ನು ತೆಗೆದರೆ ಮಾತ್ರ ಸಾಧ್ಯವಾಗುತ್ತದೆ. ಏಕೆಂದರೆ ಇವತ್ತು ಕಂಟ್ರಾಕ್ಟರ್‌ಗಳು ನೂರು ಟನ್ ಕಟ್ಟಿಗೆ ಬೇಕೆಂದು ಲೈಸೆನ್ಸ್ ತೆಗೆದುಕೊಂಡು ಒಂದು ಸಾವಿರ ಟನ್ ಕಟ್ಟಿಗೆ ಕಡಿದುಕೊಂಡು ಹೋಗುತ್ತಿರುವುದನ್ನು ನಾವು ಕಂಡಿದ್ದೇವೆ.

ಪರಿಸ್ಥಿತಿ ಹೀಗಿರುವಾಗ ರೈತನಾದವನು ತನ್ನ ಹೊಲದಲ್ಲಿ ಬೆಳೆದ ಮರವನ್ನು ತನ್ನ ಉಪಯೋಗಕ್ಕೆ ಏತಕ್ಕಾಗಿ ಕಡಿದುಕೊಳ್ಳಬಾರದು. ಅವನು ಆ ಮರವನ್ನು ಕಡಿಯುವುದಾದರೂ ಯಾವಾಗ ಎಂದರೆ, ಆ ಮರ ಒಣಗಿ, ಇಲ್ಲವೆ ಫಲ ಬಿಡದೆ, ಅದೂ ಇಲ್ಲವೆ ಅನುಪಯುಕ್ತವೆಂದು ಕಂಡು ಬಂದಾಗ ಉರುವಲಿಗೆ ಇಲ್ಲವೆ ಸಾಮಾನುಗಳನ್ನು ತಯಾರಿಸಲು ಕಡಿಯುತ್ತಾನೆ. ಆದರೆ ಆ ರೈತನಿಗೆ ಅರಣ್ಯವನ್ನು ಹಾಳು ಮಾಡಬೇಕೆಂಬ ಇಚ್ಛೆ ಇಲ್ಲ ಅರಣ್ಯದಿಂದ ಮಳೆ ಬರುತ್ತದೆಂಬುದು ಅವನಿಗೂ ಗೊತ್ತಿದೆ. ಇವತ್ತು ನಿಮ್ಮ ಸರ್ಕಾರದ ಅಧಿಕಾರಿಗಳು ಈ ರೈತರಿಗೆ ಕೊಡತಕ್ಕ ಚಿತ್ರಹಿಂಸೆಗಳನ್ನು ನಾವು ನೋಡುತ್ತಿದ್ದೇವೆ. ಇವತ್ತು ಕಾರ್ಖಾನೆ ಅಥವಾ ಮತ್ತಿತರ ವಿಷಯಗಳಿಗೆ ಹೆಚ್ಚಿನ ರೀತಿಯಲ್ಲಿ ಕಟ್ಟಿಗೆ ಹೋಗುತ್ತಿದ್ದರೂ ಅದರ ಬಗ್ಗೆ ಸರ್ಕಾರಿ ಅಧಿಕಾರಿಗಳು ಲಕ್ಷ್ಯ ವಹಿಸದೆ, ಒಬ್ಬ ಬಡ ರೈತನಿಗೆ ಕಿರುಕುಳ ಕೊಟ್ಟು ಅವನಿಂದ ಅರಣ್ಯ ಹಾಳಾಗುತ್ತಿದೆ ಎಂದು ಹೇಳುತ್ತಿದ್ದಾರೆ.

ಮಾನ್ಯ ಸಭಾಧ್ಯಕ್ಷರೆ ಬಿಜಾಪುರ ಜಿಲ್ಲೆಯಲ್ಲಿ ಸರ್ಕಾರಿ ಡಿಪೋಗಳ ಮೂಲಕ ಕಟ್ಟಿಗೆಯನ್ನು ಮಾರಾಟ ಮಾಡಲಾಗುತ್ತಿದೆ ಎಂದು ಹೇಳುತ್ತಿದ್ದಾರೆ, ಆದರೆ ಆ ಡಿಪೋಗಳು ಎಲ್ಲಿವೆ ಎಂಬುದು ನನಗೆ ಗೊತ್ತಿಲ್ಲ. ತಾವು ಹೆಚ್ಚಿನ ರೀತಿಯಲ್ಲಿ ಕಟ್ಟಿಗೆ ಡಿಪೋಗಳನ್ನು ತೆರೆದು ಅವುಗಳ ಮೂಲಕ ಮಾರಾಟ ಮಾಡಿದರೆ ಯಾವ ರೈತರೂ ಕೂಡ ಕಟ್ಟಿಗೆಯನ್ನು ತರುವುದಕ್ಕೆ ಕಾಡಿಗೆ ಹೋಗುವುದಿಲ್ಲ. ತಾವು ಈ ಕಾಯಿದೆಯಲ್ಲಿರತಕ್ಕ ಲೋಪದೋಷಗಳನ್ನು ಹೊರಹಾಕಿ ಸಭೆಯ ಮುಂದೆ ತಂದರೆ ಒಳ್ಳೆಯದು ಇಲ್ಲದೇ ಹೋದರೆ ಈ ಮಸೂದೆಯಿಂದ ಕರ್ನಾಟಕದ ರೈತರ ಸಮಗ್ರ ಕೊಲೆ ಮಾಡಿದಂತಾಗುತ್ತದೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ವಿ. ಪತ್ತಾರ್ (ಜಮಖಂಡಿ) :—ಸನ್ಮಾನ್ಯ ಸಭಾಪತಿಯವರೆ, ಇದುವರೆಗೆ ಅನೇಕ ಜನ ಮಾನ್ಯ ಮಿತ್ರರುಗಳು ಈ ವಿಷಯದಲ್ಲಿ ಮಾತನಾಡಿದ್ದಾರೆ. ಬಯಲುನಾಡಿನ ಜನ ಈ ಸೌದೆಯ ಬಗ್ಗೆ ಎಷ್ಟು ತೊಂದರೆಗೆ ಈಡಾಗಿದ್ದಾರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಬಹುಶಃ ಹೆಚ್ಚಿನ ಮಟ್ಟಿಗೆ ಕಾಡುಗಳನ್ನು ನಾವು ಕಾಣುವುದಕ್ಕೆ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಸರ್ವಜ್ಞನ ಒಂದು ವಚನ ಜ್ಞಾಪಕಕ್ಕೆ ಬರುತ್ತದೆ. ಆತ ಏನು ಹೇಳಿದ್ದಾನೆಂದರೆ

“ ಊರು ಪನಿಯದಲಿಲ್ಲ,
ನೀರೊಂದು ಗಾವುದವು,
ಸಾರಿ ನಿಲ್ಲುವೆಡೆ ನೆರಳಿಲ್ಲ,
ಬಡಗಲದ ದಾರಿಯೇ ಬೇಡೆಂದ ಸರ್ವಜ್ಞ”.

ಅಂದರೆ ಇದರ ಅರ್ಥ ಬಯಲು ನಾಡಿನಲ್ಲಿ ಗಿಡಮರಗಳು ಕಡಿಮೆ ಎಂದು. ಇವತ್ತು ಜನರು ಕಟ್ಟಿಗೆಗಳನ್ನು ಕಡಿದುಕೊಂಡು ಹೋಗಿ ಬೆಟ್ಟಗಳನ್ನು ಬರಿದು ಮಾಡಿದ್ದಾರೆ. ಇದರಿಂದಾಗಿ ನಮ್ಮ ಜಿಲ್ಲೆಯಲ್ಲಿ ಸೌದೆಯ ಅಭಾವ ಬಹಳವಾಗಿದೆ. ಈಗ ಏನು ಮಾಡುತ್ತಿದ್ದಾರೆಂದರೆ ರಸ್ತೆಗಳ ದಂಡೆಯಲ್ಲಿರತಕ್ಕ ಮರಗಳ ಟೊಂಗೆಗಳನ್ನು ಮೊದಲು ಕಡಿಯುತ್ತಾರೆ, ಅಮೇಲೆ ಮರದ ಬುಡಗಳನ್ನೇ ಕಡಿಯುವ ವಿಧಾನವನ್ನು ಅನುಸರಿಸುತ್ತಿದ್ದಾರೆ. ಟೀ ತೋಟಗಳ ಮಾಲೀಕರು ಶ್ರೀಮಂತರಾದ್ದರಿಂದ ಅವರು ಹೇಗಾದರೂ ಮಾಡಿಕೊಳ್ಳುತ್ತಾರೆ. ಆದರೆ ಬಡವರಿಗೆ ಸೌದೆಯ ಅಗತ್ಯ ಬಹಳ ಇರುವುದರಿಂದ ಇವರಿಗೆ ಉರುವಲನ್ನು ನಾವು ಪೂರೈಸಬೇಕಾಗುತ್ತದೆ. ತಾವು ಟೀ ತೋಟಗಳ ಮಾಲಿಕರಿಗೆ ನೀವು ಯಾವರೀತಿಯಲ್ಲಾದರೂ ಉರುವಲನ್ನು ಒದಗಿಸಿಕೊಳ್ಳಿ ಅದು ನಮಗೆ ಸಾಧ್ಯವಿಲ್ಲವೆಂದು ಹೇಳಬೇಕು.

ಮಾನ್ಯ ಸಭಾಧ್ಯಕ್ಷರೆ, ಕೊನೆಯದಾಗಿ ಹೇಳುವುದಾದರೆ, ನಮ್ಮ ನಾಡಿನ ಬಡ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಈ ಮಸೂದೆಯನ್ನು ಪುನರ್ ವಿಮರ್ಶೆಮಾಡಿ ಸಭೆಯ ಮುಂದೆ ತರಬೇಕೆಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ. ರಾಮೇಗೌಡ.— ಮಾನ್ಯ ಅಧ್ಯಕ್ಷರೆ. ನನ್ನ ಸ್ನೇಹಿತರು ಹೇಳಿದಂಥ ಎಲ್ಲ ವಿಚಾರಗಳನ್ನೂ ನಾನೂ ಸಮಾಧಾನವಾಗಿ, ಸಾವಧಾನದಿಂದ ಕೇಳಿದ್ದೇನೆ. ಈ ಒಂದು ಆಕ್ಟ್ ಏನಿದೆ ಇದು ೧೯೬೬ರಲ್ಲಿ ಬಂದಿರುವುದು. ಆ ಸಂದರ್ಭದಲ್ಲಿ ನಾನು ಈ ಮನೆಯ ಸದಸ್ಯನಾಗಿ ಆಲೋಚನೆ ಮಾಡಿದಾಗ ಬಹು

ಮುಂದಿ ಬಹು ಮತದಿಂದ ಈ ಮಸೂದೆಯನ್ನು ಒಪ್ಪಿಕೊಂಡಿದ್ದರು. ಈಗ ಆ ವಾತಾವರಣ ಬದಲಾವಣೆಯಾದಂತೆ ಬದಲಾವಣೆ ಮಾತುಗಳನ್ನೇ ಆಡುತ್ತಿದ್ದಾರೆ. ಅದೇ ರೀತಿ ನಾನೂ ಕೂಡ ಆ ಬದಲಾದ ವಾತಾವರಣವನ್ನೇ ಅನುಸರಿಸಿ ಕೇಳಿದ್ದೇನೆ. ಈಗಾಗಲೇ ಇದರ ಬಗ್ಗೆ ಒಂದು ಆರ್ಡಿನೆನ್ಸ್ ಹೊರಡಿಸಿದೆ. ಇದಕ್ಕೆ ಮೇಲ್ಮನೆಯಲ್ಲಿ ಒಪ್ಪಿಗೆ ಸಿಕ್ಕಿ ಈಗ ತಮ್ಮ ಮುಂದೆ ಬಂದಿದೆ. ಈ ಮಸೂದೆಯೇ ಬೇಡವೆಂದು ಹೇಳುವುದಾದರೆ ಒಂದು ನೋಟಿಫಿಕೇಷನ್ ಮಾಡಬಹುದು. ಆದರೆ ಇಲ್ಲಿ ಬಂದಿರತಕ್ಕದ್ದು ಅದಲ್ಲ. ಸರ್ಕಾರೀ ಅಧಿಕಾರಿಗಳು ಜನರಿಗೆ ತೊಂದರೆ ಕೊಡುತ್ತಿದ್ದಾರೆಂಬುದು ಎಲ್ಲ ಕಡೆಯಿಂದಲೂ ಬರುತ್ತಿರುವ ದೂರು.

ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಏನೆಂದರೆ, ಯಾವ ಅಧಿಕಾರಿಯನ್ನೇ ಆಗಲಿ ನಾನು ತಹಬಂದಿಗೆ ತರಬಲ್ಲೆ. ಆದರೆ ಅದರಲ್ಲಿ ಯಾವ ಮಾನ್ಯ ಸದಸ್ಯರ ಕೈವಾಡವೂ ಇರಬಾರದು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಯಾವುದಾದರೂ ಒಂದು ಟ್ರಾನ್ಸ್‌ಫರನ್ನು ನಾವು ಮಾಡಿದರೆ ಕೂಡಲೇ ಅದರಲ್ಲಿ ಯಾರಾದರೂ ಒಬ್ಬ ಸದಸ್ಯರು ಕೈ ಹಾಕುತ್ತಾರೆ. ಇದು ಸರಿಯಲ್ಲ. ಇದನ್ನು ಮಾನ್ಯ ಸದಸ್ಯರೆಲ್ಲರೂ ತಿಳಿದು ಕೊಳ್ಳಬೇಕು. ಅವನು ಕಳ್ಳ ಎಂದರೆ, ಅದನ್ನು ಕಂಡು ಹಿಡಿದವರು ಯಾರು ಎಂದು ಕೇಳುತ್ತಾರೆ. ಹೀಗೆ ಕೇಳಿದರೆ ಇದಕ್ಕೆ ನಾವು ಯಾವ ಮೆಷಿನರಿಯನ್ನು ಎಲ್ಲಿಂದ ತರಬೇಕು ?

ಟ್ರಾನ್ಸ್‌ಫರ್ ಮಾಡಬೇಕು, ಬದಲಾವಣೆಯನ್ನು ಮಾಡಬೇಕೆಂದು ಕೇಳಿಕೊಂಡು ಬರತಕ್ಕಂಥ ಸದಸ್ಯರು ಎಷ್ಟೋ ಜನರು ಇರುತ್ತಾರೆ. ಹೀಗೆ ಬದಲಾವಣೆಯನ್ನು ಮಾಡುವಾಗ ದೊಡ್ಡ ಹುಲಿಗೆ ದೊಡ್ಡ ಅರಣ್ಯವೇ ಬೇಕು ಎಂದು ಕೇಳುತ್ತಾರೆ. ದೊಡ್ಡ ಹುಲಿಗೆ ದೊಡ್ಡ ಅರಣ್ಯವನ್ನು ನಾನು ಎಲ್ಲಿಂದ ತರುವುದು ? ಈ ರೀತಿ ನನಗೆ ತೊಂದರೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ತಾವು ತಾಳ್ಮೆಯಿಂದ ವರ್ತಿಸಿದರೆ ಕಾಡಿನ ಕಳ್ಳತನವನ್ನು ತಡೆಗಟ್ಟಲು ಸಹಾಯವಾಗುತ್ತದೆ. ತಮ್ಮ ಮುಖಾಂತರ ಮಾನ್ಯ ಸಭೆಯ ಗಮನಕ್ಕೆ ತರತಕ್ಕಂಥ ಈ ವಿಷಯ ನಿಜವಾದ ಸಂಗತಿಯಾಗಿರುತ್ತದೆ. ಐದು ಟನ್ ಸೌದೆಯನ್ನು ಉಪಯೋಗಿಸುವವರು ಯಾರು ಇದ್ದಾರೆ. ಅದಕ್ಕಿಂತಲೂ ಹೆಚ್ಚಿಗೆ ಸೌದೆಯನ್ನು ಯಾರು ಉಪಯೋಗಿಸುವವರು ಇದ್ದಾರೆ ಅದನ್ನು ಪರಿಶೀಲನೆ ಮಾಡೋಣ. ನಮ್ಮ ಕೊಡಗು ಜಿಲ್ಲೆಯವರು ಹೇಳಿದ್ದಾರೆ. ಅದನ್ನು ಬೇಡವೆಂದು ಹೇಳುವುದಿಲ್ಲ. ಆದರೆ ಮರಗಳನ್ನು ಕಡಿಯುವುದಕ್ಕೆ ಯಾರು ಅಡ್ಡಿ ಬರಬಾರದೆಂದು ಹೇಳುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಅದನ್ನೂ ಕೂಡ ಆಲೋಚನೆ ಮಾಡೋಣ. ಮಾನ್ಯ ಸದಸ್ಯರೆಲ್ಲರೂ ಹೇಳಿದಂಥ ಎಲ್ಲ ವಿಷಯಗಳನ್ನೂ ಗಮನದಲ್ಲಿ ಇಟ್ಟುಕೊಂಡಿದ್ದೇನೆ. ಮತ್ತೆ ಅಡಿಕೆ ತೋಟವನ್ನು ಇದರಲ್ಲಿ ಸೇರಿಸಬೇಕು ಎನ್ನುವ ವಿಷಯವನ್ನು ಮಾನ್ಯ ಸದಸ್ಯರು ಹೇಳಿರುತ್ತಾರೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಅಡಿಕೆ ತೋಟದ ಪಕ್ಕದಲ್ಲಿ ಜಮೀನನ್ನು ಯಾರು ಹೊಂದಿರುತ್ತಾರೆ ಅವರಿಗೂ ನೋಟಿಫಿಕೇಷನ್ ಮೂಲಕ ಈ ಒಂದು ಕಾಯಿದೆಯನ್ನು ಅನ್ವಯಿಸೋಣ. ಇನ್ನು ಸಿಲ್ಕ್ ವೀವರ್ಸ್ ಬಗ್ಗೆ ಹೇಳಿರುತ್ತಾರೆ. ಅವರಿಗೆ ಏನು ತೊಂದರೆ ಇಲ್ಲ ಅವರಿಗೂ ಸಾಕಷ್ಟು ಸೌದೆಯನ್ನು ಕೊಟ್ಟಿದ್ದೇವೆ. ಹೊಗಸೊಪ್ಪು ಸುಣ್ಣದಗೂಡು, ಈ ಎಲ್ಲ ಕೈಗಾರಿಕೆಗಳಿಗೂ ಸಾಕಷ್ಟು ಸೌದೆಯ ವ್ಯವಸ್ಥೆಯನ್ನು ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಕೊರತೆ ಬಿದ್ದಾಗ ಕೇರಳ ರಾಜ್ಯದಿಂದಲೂ ಸಾಕಷ್ಟು ಸೌದೆಯನ್ನು ತರಿಸಿಕೊಟ್ಟಿರುತ್ತೇವೆ. ನಮ್ಮ ಕನಕಪುರದ ಮಾನ್ಯ ಸದಸ್ಯರು ಹೇಳಿದ್ದರು ರೈತನ ಕಷ್ಟ ನೋಡುವುದಕ್ಕೆ ಸಾಧ್ಯವೇ ಇಲ್ಲವೆಂದು ಬಹಳ ಕಳಕಳಿಯಿಂದ ಹೇಳಿದರು. ೧೦೦ ಲಾರಿಗಳಷ್ಟು ಸೌದೆ ಅಲ್ಲಿಯ ಅರಣ್ಯ ಪ್ರದೇಶದಿಂದ ಕಣ್ಮರೆಯಾಗಿ ಹೋಗಿರುತ್ತದೆ, ಈ ವಿಚಾರ ಅನೇಕ ಮಾನ್ಯ ಸದಸ್ಯರಿಗೂ ಗೊತ್ತಿಲ್ಲದಿರಬಹುದು ಅದನ್ನು ಕಂಡು ಹಿಡಿದಿದ್ದೇವೆ.

ಒಬ್ಬ ಸದಸ್ಯರು.—ಇದಕ್ಕೆ ಯಾರು ಜವಾಬ್ದಾರರು ಸ್ವಾಮಿ?

ಶ್ರೀ ಜಿ. ರಾಮೇಗೌಡ.—ಅದಕ್ಕೆ ಯಾರು ಜವಾಬ್ದಾರರು ಎನ್ನುವುದನ್ನೂ ಕೂಡ ಕಂಡುಹಿಡಿಯಲಾಗಿದೆ. ಅಧಿಕಾರಿಗಳನ್ನು ವರ್ಗಮಾಡಿದರೆ ಸಾಕು, ಅವರು ನಮ್ಮ ಸಂಬಂಧೀಕರು, ಅವರಿಗೆ ಅನ್ಯಾಯವಾಗಿದೆ, ಅವರು ರಜಾದಲ್ಲಿದ್ದರು. ಅವರಿಗೆ ದೊಡ್ಡ ರೋಗವಿತ್ತು ಹೀಗೆಲ್ಲ ಹೇಳುತ್ತಾರೆಯೇ ಹೊರತು ನನಗೆ ಸಹಾಯ ಮಾಡಲಿಕ್ಕೆ ಮುಂದೆ ಒಬ್ಬರೂ ಬರುವುದಿಲ್ಲ. ಇದು ನನ್ನ ಕರ್ಮ. ಒಂದು ಡಿವಿಜನ್ನಿನಿಂದ ಮತ್ತೊಂದು ಡಿವಿಜನ್‌ಗೆ ೨-೩ ಬಾರಿ ವರ್ಗ ಮಾಡುವುದಕ್ಕೆ ಕಾರಣರಾದವರು ಈ ಸಭೆಯ ಮಾನ್ಯ ಸದಸ್ಯರೆ ಕಳ್ಳತನವನ್ನು ನಿಲ್ಲಿಸಬೇಕು ಎನ್ನುವುದಕ್ಕೆ ನನ್ನ ಅಭ್ಯಂತರವೇನು ಇಲ್ಲ. ಕಳ್ಳ

ರನ್ನು ಹಿಡಿದುಕೊಡಿ, ಇಂಥ ಕಡೆ ಕಟ್ಟಿಗೆಯನ್ನು ಕಡಿದಿದ್ದಾರೆ, ಅಂಥವರು ಕಳ್ಳತನ ಮಾಡಿದ್ದಾರೆ ಎನ್ನುವುದನ್ನು ತೋರಿಸಿಕೊಡಿ ಅವರಿಗೆ ಯಾವರೀತಿಯಲ್ಲಿ ಶಿಕ್ಷೆಯನ್ನು ವಿಧಿಸಬೇಕೋ ಆ ರೀತಿಯಲಿ ವಿಧಿಸಲು ತಯಾರಾಗಿದ್ದೇನೆ. ಅಲ್ಲದೆ ಅಂಥವರಿಗೆ ಹೇಗೆ ಶಿಕ್ಷೆಯನ್ನು ಮಾಡಬೇಕು ಎನ್ನುವುದಕ್ಕೆ ನಿಮ್ಮಿಂದಲೇ ಸಲಹೆಯನ್ನು ಪಡೆದು ಶಿಕ್ಷೆಯನ್ನು ಮಾಡ್ತೀನಿ. ಇನ್ನು ಕಂಟ್ರಾಕ್ಟ್ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದರು. ಕಂಟ್ರಾಕ್ಟರ್‌ಗಳನ್ನು ಅರಣ್ಯಕ್ಕೆ ಬಿಡಬಾರದೆಂದು ತಪ್ಪಿಸಿದ್ದೆ ನಾನು. ಈಗಲೂ ತಾವು ಒಪ್ಪುವುದಾದರೆ ಅದರ ಬಗ್ಗೆ ನಾನೂ ಒಂದು ಕಾನೂನನ್ನೇ ತರುತ್ತೇನೆ. ಕಂಟ್ರಾಕ್ಟರುಗಳನ್ನು ಕಾಡಿನೊಳಗೆ ಬಿಡಲೇಬಾರದೆಂದು ಹೇಳುವವರಲ್ಲಿ ನಾನೂ ಒಬ್ಬ. ಕಾರ್ಪೊರೇಷನ್ ಡಿಪಾರ್ಟ್‌ಮೆಂಟನ್ನು ತೆಗೆಯಬೇಕೆಂದು ಪ್ರಯತ್ನ ಇದ್ದರೂ ಕೂಡ ಇದನ್ನು ತೆಗೆಯುವುದರಿಂದ ತೀರ ಬಡವರಿಗೆ ಬಹಳ ತೊಂದರೆಯಾಗುತ್ತದೆಂದು ಹೇಳಿದ ಮೇಲೆ ಇದನ್ನು ಪರಿಶೀಲನೆ ಮಾಡಬೇಕಾಗಿರುತ್ತದೆ. ಈಗ ಸದ್ಯಕ್ಕೆ ೫ ಟನ್ ಸೌದೆಯನ್ನು ಕೊಡುತ್ತಿದ್ದೇವೆ ಇದು ಸಾಲದೆ? ೫ ಟನ್ ಸೌದೆ ಎಲ್ಲಿದೆ ಅದನ್ನು ತೆಗೆದುಕೊಂಡು ಹೋಗಬಹುದು. ತಲೆಯ ಮೇಲೆ ಹೊರೆಯನ್ನು ತೆಗೆದುಕೊಂಡು ಹೋಗಬಹುದು. ಅದಕ್ಕೇನು ತೊಂದರೆ ಇಲ್ಲ. ಆದರೆ ಗಾಡಿಯಲ್ಲಿ ಕಟ್ಟಿಗೆಯನ್ನು ತೆಗೆದುಕೊಂಡು ಹೋಗುವುದಕ್ಕೆ ಮಾತ್ರ ಅವಕಾಶವಿರುವುದಿಲ್ಲ. ಇದಕ್ಕೆ ಕಾರಣಗಳಿರುತ್ತವೆ. ಏನೆಂದರೆ ಕಾಡಿನ ಒಳಗಡೆ ಹೋದ ಮನುಷ್ಯನಿಗೆ ನಾನಾರೀತಿಯಲ್ಲಿ ಆಲೋಚನೆಗಳು ಬರುತ್ತವೆ. ಅವನ ಕಣ್ಣಿಗೆ ಶ್ರೀಗಂಧದ ಮರ ಕಾಣುತ್ತದೆ ೨ ತುಂಡು ಶ್ರೀಗಂಧವನ್ನು ಕಡಿದರೆ ಸಾಕು ೧೦ ರೂಪಾಯಿಗಳು ದೊರೆಯುತ್ತದೆ ಎನ್ನುವ ಆಸೆ ಅವನಲ್ಲಿ ಉಂಟಾಗುತ್ತದೆ.

ಒಬ್ಬ ಸದಸ್ಯರು.—ರೈತರು ಆ ರೀತಿ ಮಾಡುವುದಿಲ್ಲ.

ಶ್ರೀ ಜಿ, ರಾಮೇಗೌಡ. ರೈತರು ಆ ರೀತಿ ಮಾಡುವುದಿಲ್ಲ. ಅದನ್ನು ನಾನು ಒಪ್ಪುತ್ತೇನೆ. ಆದರೆ ರೈತರಿಗೆ ಸಲಹೆಯನ್ನು ಕೊಟ್ಟು ಆ ರೀತಿ ಮಾಡಿಸುತ್ತಾರೆ. ಕಾಡಿನಿಂದ ಹೊರಗಡೆ ತಂದು ಕೊಟ್ಟರೆ ಸಾಕು ಹಣವನ್ನು ಕೊಡಲು ಜನರು ತಯಾರಿರುತ್ತಾರೆ, ಆದ್ದರಿಂದ ಗಾಡಿಗಳಲ್ಲಿ ಕಾಡಿನಿಂದ ಕಟ್ಟಿಗೆ ತರುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿದರೆ ಅದಕ್ಕೆ ನಾನು ಒಪ್ಪುವುದಿಲ್ಲ. ಈಗಾಗಲೇ ಈ ಆರ್ಡಿನೆನ್ಸ್‌ಗೆ ಮೇಲಿನ ಮನೆಯಲ್ಲೂ ಕೂಡ ಒಪ್ಪಿಗೆಯನ್ನು ಕೊಟ್ಟಿರುತ್ತಾರೆ. ಈ ಮನೆಯಲ್ಲಿಯೂ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿರುತ್ತದೆ. ಈ ಒಂದು ಮಸೂದೆಯ ಬಗ್ಗೆ ಹೇಳಿರತಕ್ಕಂಥ ಎಲ್ಲ ಅಂಶಗಳನ್ನು ಪರಿಶೀಲನೆ ಮಾಡಿ ಇನ್ನೂ ಏನು ಬದಲಾವಣೆಯಾಗಬೇಕು ಎನ್ನುವುದನ್ನು ಪರಿಶೀಲನೆ ಮಾಡುತ್ತೇನೆಂದು ಇಷ್ಟು ಹೇಳಿ ತಾವು ಈ ತಿದ್ದುಪಡಿ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಸಚಿವರು ಮಾತನಾಡುತ್ತಾ ಕೆಲವಾರು ಆರೋಪಗಳನ್ನು ಮಾಡಿದರು. ಇದರ ಬಗ್ಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ರೀತಿ ಯಾವುದಾದರೂ ಒಂದು ವಿಷಯ ಬಂದಾಗ ಸಲಹೆ ಕೊಡತಕ್ಕಂಥ ಸಂದರ್ಭದಲ್ಲಿ ಎಲ್ಲ ಸದಸ್ಯರನ್ನೂ ಒಟ್ಟಿಗೆ ಸೇರಿಸಿ ಆರೋಪ ಮಾಡತಕ್ಕಂಥದ್ದು ಸರಿಯಾಗಿ ಕಾಣುವುದಿಲ್ಲ. ಟ್ರಾನ್ಸ್‌ಫರ್ ಮಾಡುವ ಬಗ್ಗೆ ಕೇಳುವುದಕ್ಕೆ ಬರುವುದು ಸಹಜವಾಗಿರುತ್ತದೆ. ಅಧಿಕಾರಿಗಳು ತೊಂದರೆಗಳಿಗೆ ಒಳಗಾಗಿ, ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ ಈ ಕಾರಣಕ್ಕಾಗಿ ಕೇಳಿರಬಹುದೇ ವಿನಃ, ಕಳ್ಳತನ ಮಾಡುವುದಕ್ಕೆ, ಅನ್ಯಾಯ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ಹೇಳಿದರೆ ಮಾನ್ಯ ಸಚಿವರು ಯಾವ ರೀತಿ ಒಪ್ಪಿಕೊಳ್ಳುತ್ತಾರೋ ನನಗಂತೂ ಅರ್ಥವಾಗುತ್ತಿಲ್ಲ. ದಯವಿಟ್ಟು ಯಾರೋ ಒಬ್ಬ ಸದಸ್ಯರು ಆ ರೀತಿ ಮಾಡಿದರೆ ಎಲ್ಲ ಸದಸ್ಯರನ್ನೂ ಸೇರಿಸಿ ಈ ಸಂದರ್ಭದಲ್ಲಿ ಹೇಳುವುದು ಸರಿಯಲ್ಲವೆಂದು ಹೇಳುತ್ತೇನೆ,

ಶ್ರೀ ಜಿ. ರಾಮೇಗೌಡ.—ನಾನು ಆ ರೀತಿ ಹೇಳುತ್ತಿಲ್ಲ. ಸಾಮಾನ್ಯವಾಗಿ ನನಗೆ ಇರತಕ್ಕಂಥ ಕಷ್ಟವನ್ನು ನಿಮ್ಮ ಮುಂದೆ ಇಟ್ಟಿರುತ್ತೇನೆ. ನಿಮಗೆ ಇರತಕ್ಕಂಥ ಕಷ್ಟವನ್ನು ನಮ್ಮ ಮುಂದೆ ಇಟ್ಟಿರುತ್ತೀರಿ. ಆ ರೀತಿ ಯಾರು ಮಾಡಿರುತ್ತಾರೋ ಅವರಿಗೆ ಅನ್ವಯವಾಗುತ್ತದೆಯೋ ಹೊರತು ಎಲ್ಲರಿಗೂ ಅನ್ವಯವಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

MR. SPEAKER.—I will now put the consideration Motion to the vote of the House. The question is :

"That the Karnataka Preservation of trees (Amendment) Bill, 1979, as passed by the Legislative Council, be taken into consideration".

The motion was adopted.

CLAUSES 2 TO 4

MR. SPEAKER.—As there are no amendments, I will put clauses 2-4 to the vote of the House. The question is.—

"That clauses 2 to 4, Both inclusive, do stand part of the Bill".

The motion was adopted.

Clauses 2 to 4 both inclusive were added to the Bill.

CLAUSE 1 etc.,

MR. SPEAKER.—The question is :

"That clause 1, The Long Title the Preamble and the enacting formula do stand part of the Bill"

The motion was adoptad.

Clause 1, The Long Title the Preamble and the enacting formula were added to the Bill.

Motion to pass

SRI G. RAME GOWDA.—I move :

"That the Karnataka Preservation of trees (Amendment) Bill, 1979 as passed by the Legislative Council be passed".

MR SPEAKER.—The question is :

"That the Karnataka Preservation of Trees (Amendment) Bill, 1979as passed by the Legislative Council be passed".

The Motion was adopted and the Bill was passed.

KARNATAKA INAMS ABOLITION LAWS (AMENDMENT) BILL, 1979

(INTRODUCTION)

SRI B. BASAVALINGAPPA (Minister for Revenue),--Sir, I beg to move :

"That leave be granted to introduce the Karnataka Inams Abolition Laws (Amendment) Bill, 1979."